# 1. ಸುಂದರ ಸಂಸ್ಕೃತಿ

ಸಂಸ್ಕೃತಿಯೆನ್ನುವ ಪದವು ವಿಶಾಲ ಅರ್ಥ ವ್ಯಾಪ್ತಿಯನ್ನು ಹೊಂದಿದೆ. ಸಂಕ್ಷಿಪ್ತವಾಗಿ ಸಂಸ್ಕೃತಿಯೆಂದರೆ ಮಾನವನ ಅಂತರಂಗದ ವಿಕಾಸವೆನ್ನಬಹುದು. ನಾಗರಿಕನಾಗುತ್ತಿರುವ ಮಾನವನು ಸಂಸ್ಕೃತಿಯಿಂದ ದೂರವಾಗುತ್ತಿರುವುದು ಈಗ ನಡೆಯುತ್ತಿರುವ ವಿದ್ಯಮಾನವಾಗಿದೆ! ಅದರ ಪರಿಣಾಮವಾಗಿ ಭಾವನಾತ್ಮಕ ಸಂಬಂಧಗಳಿಂದ ಆತ ದೂರ ಉಳಿದು ಬಿಡುತ್ತಾನೆ. ಬುದ್ಧಿಯ ವಿಕಾಸದೊಂದಿಗೆ ಮಗುವಿನಲ್ಲಿ ಉತ್ತಮ ಭಾವನೆಯೂ ವಿಕಾಸಗೊಳ್ಳುವ ಅಗತ್ಯವಿದೆ. ಶಿಕ್ಷಣದ ಉದ್ದೇಶ ಬರಿಯ ಯಂತ್ರ ಮಾನವನ ನಿರ್ಮಾಣವಲ್ಲ. ಹಿರಿಯರ, ಸ್ತ್ರೀಯರ ಬಗ್ಗೆ ಗೌರವದ ಭಾವನೆ ಇರಬೇಕು. ಮಾತೃ ಪ್ರೇಮದ ಪರಿಕಲ್ಪನೆ, ಪ್ರಕೃತಿ–ಭಾಷೆಯೊಂದಿಗಿನ ಅವಿನಾಭಾವ ಸಂಬಂಧ, ಕಲೆಯ ಹಿರಿಮೆಯ ಬಗೆಗಿನ ಅರಿವು ವಿದ್ಯಾರ್ಥಿಗಳಲ್ಲಿ ಮೂಡುವಂತಾಗಬೇಕು. ಈ ಎಲ್ಲ ಉತ್ತಮಾಂಶಗಳು ಮಗುವಿನ ಬಾಲ್ಯದಲ್ಲೇ ಕುಡಿಯೊಡೆದು ಹೆಮ್ಮರವಾಗಿ ನಾಳಿನ ಸತ್ಪ್ರಜೆಯ ರೂಪೀಕರಣವಾಗಬೇಕು. ಇದು ಇಂದಿನ ಸಮಾಜಕ್ಕೆ ಅಗತ್ಯವಾಗಿದೆ. ಈ ಉದ್ದೇಶವನ್ನು ಈಡೇರಿಸುವುದಕ್ಕೋಸ್ಕರ ಈ ಘಟಕದಲ್ಲಿ ನಾಲ್ಕು ಪಾಠಗಳನ್ನು ನೀಡಲಾಗಿದೆ.

## ಕಲಿಕಾ ಸಾಧನೆಗಳು

- ಆಲಿಸಿದ ವಿಚಾರಗಳನ್ನು ತಾರ್ಕಿಕವಾಗಿ ವಿಶ್ಲೇಷಿಸಿ ಅಭಿಪ್ರಾಯವನ್ನು ಮೌಖಿಕವಾಗಿ ಪ್ರಕಟಿಸುವುದು.
- ಭಾಷಾ ಘಟಕಗಳಾದ ಪದಗಳು, ನುಡಿಗಟ್ಟುಗಳು, ಗಾದೆಗಳು ಇತ್ಯಾದಿಗಳನ್ನು ಸಂದರ್ಭಾನುಸಾರ ಉಪಯೋಗಿಸಿಕೊಂಡು ಮಾತನಾಡುವುದು.
- ರಾಗ, ತಾಳ, ಭಾವದೊಂದಿಗೆ ಮಂಡಿಸಿದ ಕವಿತೆಗಳನ್ನು ಆಲಿಸಿ ಆಸ್ವಾದಿಸುವುದು.
- ಗದ್ಯ, ಪದ್ಯವನ್ನು ಭಾವಪೂರ್ಣವಾಗಿ ಉಚ್ಚಾರಣಶುದ್ಧಿಯೊಂದಿಗೆ ನಿರರ್ಗಳವಾಗಿ ಓದುವುದು.
- ಸ್ವಂತ ಆಸಕ್ತಿಯಿಂದ ಪುಸ್ತಕ ಮತ್ತು ಇತರ ವಾಚನ ಸಾಮಗ್ರಿಗಳನ್ನು ಕಂಡುಕೊಂಡು ಓದುವುದು.
- ವಾಚನಾನುಭವಗಳನ್ನು ವಿಭಿನ್ನ ರೀತಿಯಲ್ಲಿ ಹಂಚಿಕೊಳ್ಳುವುದು.
- ಕೇಳಿದ, ಓದಿದ ವಿಚಾರಗಳನ್ನು ಅರ್ಥೈಸಿ ಪ್ರಧಾನ ಆಶಯಗಳನ್ನು ತಪ್ಪಿಲ್ಲದೆ ಬರೆಯುವುದು, ಹೇಳುವುದು, ಭಾಷಣ ಮಾಡುವುದು.
- ಸ್ವತಂತ್ರವಾಗಿ ಕತೆ, ಕವಿತೆಗಳನ್ನು, ರಚನೆಗಳನ್ನು ಮಾಡುವುದು.
- ಸಂದರ್ಭಾನುಸಾರ ವಿಭಿನ್ನ ವ್ಯವಹಾರ ರೂಪಗಳನ್ನು ಆಯ್ದು ರಚನೆಗಳಲ್ಲಿ ತೊಡಗುವುದು ಮತ್ತು ಇನ್ನೊಂದು ವ್ಯವಹಾರ ರೂಪಕ್ಕೆ ಬದಲಾಯಿಸುವುದು.
- ಸೃಜನಾತ್ಮಕ ಕೃತಿಗಳನ್ನು ತಯಾರಿಸುವುದು. ಅವುಗಳನ್ನು ತರಗತಿಯ ಭಿತ್ತಿ ಪತ್ರಿಕೆ, ಹಸ್ತಪತ್ರಿಕೆಗಳಲ್ಲಿ ಪ್ರಕಟಿಸುವುದು.
- ವಿಭಿನ್ನ ಭಾಷಾನುಭವಗಳನ್ನು ಗಳಿಸಿ ಪದಗಳ ಪ್ರಯೋಗಗಳೇ ಮೊದಲಾದವುಗಳನ್ನು ಬಳಸಿಕೊಂಡು ರಚನೆಗಳನ್ನು ಮಾಡುವುದು.
- ಕತೆ, ಕವಿತೆ, ಲೇಖನಗಳಲ್ಲಿ ಸಂದರ್ಭಾನುಸಾರ ಲೇಖನ ಚಿಹ್ನೆಗಳನ್ನು ಬಳಸುವುದು.
- ರಾಗ, ತಾಳ, ಭಾವಗಳಿಂದ ಕವಿತೆಗಳನ್ನು ಹಾಡುವುದು.

## ಯೂನಿಟ್ ಗ್ರಿಡ್ – 1. ಸುಂದರ ಸಂಸ್ಕೃತಿ

**ಪಾಠ 1 ತೊಟ್ಟಿಲ ಹಾಡು** **ಸಮಯ 6ಪೀರಿಯಡ್**

| ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| • ಕವಿತೆಗಳನ್ನು ರಾಗ, ಭಾವ, ತಾಳದೊಂದಿಗೆ ಹಾಡಿ ಆಸ್ವಾದಿಸುವುದು.<br>• ಕವಿತೆಗಳನ್ನು ಭಾವಪೂರ್ಣವಾಗಿ ಉಚ್ಚಾರ ಶುದ್ಧಿಯೊಂದಿಗೆ ನಿರರ್ಗಳವಾಗಿ ಹಾಡುವುದು.<br>• ತಾಯಿ ಮತ್ತು ಮಗು ಇವರೊಳಗಿನ ಬಾಂಧವ್ಯವನ್ನು ತಿಳಿಯುವುದು.<br>• ಮಗುವು ತನ್ನ ಬಾಲ್ಯವನ್ನು ಮೆಲುಕು ಹಾಕುವಂತೆ ಮಾಡುವುದು.<br>• ಕನ್ನಡ ಜನಪದ ಸಾಹಿತ್ಯದಲ್ಲಿ ತಾಯಿ ಮತ್ತು ಮಗುವಿನ ಬಾಂಧವ್ಯವನ್ನು ತಿಳಿಸುವ ಅನೇಕ ಹಾಡುಗಳಿವೆ ಎಂಬುದನ್ನು ತಿಳಿಯುವುದು. | • ಕವಿತೆಯನ್ನು ಭಾವಪೂರ್ಣವಾಗಿಯೂ, ರಾಗವಾಗಿಯೂ ಹಾಡುವುದು.<br>• ಕವಿತೆಯಲ್ಲಿ ಇಷ್ಟವಾದ ಸಾಲುಗಳು ಯಾವುವೆಂದು ಕೇಳಿ ಕಾರಣವನ್ನು ಬರೆಯುವುದು.<br>• ಆಶಯಕ್ಕೆ ಸಂಬಂಧಿಸಿದ ಸಾಲುಗಳನ್ನು ಗುರುತಿಸಿ ಬರೆಯುವುದು.<br>• ಈ ಕವನದ ಸಾರಾಂಶವನ್ನು ಬರೆಯುವುದು.<br>• ಮಕ್ಕಳು ತಾವು ಕಂಡ ಕನಸನ್ನು ಅಮ್ಮನೊಡನೆ ಹೇಳುವ ರೀತಿಯನ್ನು ಊಹಿಸಿ ಬರೆಯುವುದು.<br>• ಸಂಗ್ರಹ<br>ತೊಟ್ಟಿಲು ತೂಗುವ ಹಾಡುಗಳನ್ನು (ಜೋಗುಳ ಹಾಡು)<br>ಸಂಗ್ರಹಿಸುವುದು. | ತೊಟ್ಟಿಲು ಹಾಡುವುದು.<br>ಸಿ.ಡಿ.<br>ಜೋಗುಳ ಹಾಡುಗಳು<br>ಕೆ.ಎಸ್.ನರಸಿಂಹ ಸ್ವಾಮಿಯವರ ‘ಮೈಸೂರು ಮಲ್ಲಿಗೆ’ | • ಹಾಡುವಿಕೆ<br>• ಸಾರಾಂಶ ಬರೆಯುವುದು.<br>• ಟಿಪ್ಪಣಿ<br>• ಜೊಗುಳ ಹಾಡುಗಳ ಸಂಗ್ರಹ |

## ಯೂನಿಟ್ ಗ್ರಿಡ್

**ಪಾಠ 2 ಕಾವೇರಿ** **ಸಮಯ 6 ಪೀರಿಯಡ್**

| ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| • ನದಿಗಳು ನಾಗರಿಕತೆಗಳ ಉಗಮಕ್ಕೆ ಕಾರಣವಾಗಿರುತ್ತವೆ. ನದಿಗಳಿಗೆ ಸಂಬಂಧಿಸಿದ ಹಲವಾರು ಪುರಾಣ ಕಥೆಗಳಿವೆ. ನದಿಗಳನ್ನು ಜನರು ಪೂಜ್ಯ ಭಾವನೆಯಿಂದ ನೋಡುತ್ತಾರೆ. ಭಾರತದ ಪ್ರಸಿದ್ಧ ನದಿಗಳ ಬಗ್ಗೆ ತಿಳಿಯುತ್ತಾರೆ. ಪ್ರತಿಯೊಂದು ನದಿಗೂ ಇರುವ ಚಾರಿತ್ರಿಕ ಅಥವಾ ಪೌರಾಣಿಕ ಹಿನ್ನೆಲೆಯನ್ನು ತಿಳಿದುಕೊಳ್ಳುತ್ತಾರೆ. ಪ್ರಾದೇಶಿಕವಾಗಿ ಹರಿಯುವ ನದಿಗಳ ಬಗ್ಗೆ ತಿಳಿಯುತ್ತಾರೆ. ನದಿಗಳ ಮಹತ್ವ ಮತ್ತು ನದಿಗಳಿಂದಾಗುವ ಪ್ರಯೋಜನಗಳನ್ನು ತಿಳಿಯುವುದು.<br>• ನದಿಗಳು ಮಲಿನಗೊಳ್ಳುತ್ತಿವೆ. ಆದುದರಿಂದ ನದಿಗಳು ಮಾಲಿನ್ಯಮುಕ್ತವಾಗಿರಬೇಕೆಂಬುದನ್ನು ತಿಳಿಯುವುದು. | • ಕ್ಷಾಮದಿಂದ ಉಂಟಾಗುವ ತೊಂದರೆಗಳ ಬಗ್ಗೆ ಚರ್ಚಿಸುವುದು.<br>• ಪಾಠಭಾಗದಲ್ಲಿ ಬಂದ ಪ್ರಶ್ನೆಗಳಿಗೆ ಉತ್ತರಿಸುವುದು.<br>• ಕಾಗೆಯು ಕಮಂಡಲವನ್ನು ಉರುಳಿಸದೇ ಇರುತ್ತಿದ್ದರೆ ಏನಾಗುತ್ತಿತ್ತು ಎಂಬುದನ್ನು ಊಹಿಸಿ ಬರೆಯುವುದು.<br>• ಅಗಸ್ತ್ಯ ಮಹರ್ಷಿ ಮತ್ತು ಕವೇರ ರಾಜನ ನಡುವೆ ನಡೆದ ಸಂಭಾಷಣೆಯನ್ನು ಬರೆಯುವುದು. | • ಕ್ಷಾಮದಿಂದ ತೊಂದರೆಗೊಳಗಾದ ಪ್ರದೇಶಗಳ ದೃಶ್ಯಗಳ ಸಿಡಿ ಪ್ರದರ್ಶನ | • ಟಿಪ್ಪಣಿ<br>• ಪ್ರಶ್ನೋತ್ತರ<br>• ಟಿಪ್ಪಣಿ<br>• ಸಂಭಾಷಣೆ |

| ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| | **ಲೇಖನ ಬರೆಯುವ:**<br>• ನದಿಗಳಿಂದ ಉಂಟಾಗುವ ಪ್ರಯೋಜನಗಳು, ನದಿಯು ಹಲವು ರೀತಿಯಲ್ಲಿ ಮಲಿನವಾಗುತ್ತಿರುವುದಕ್ಕೆ ಕಾರಣಗಳು ಮತ್ತು ಅದನ್ನು ತಡೆಗಟ್ಟುವುದರ ಬಗ್ಗೆ ಲೇಖನ ಬರೆಯುವುದು.<br><br>**ಸಂಗ್ರಹಿಸುವ:**<br>• ನದಿಗಳಿಗೆ ಸಂಬಂಧಿಸಿದ ಹಲವಾರು ಪ್ರಚಲಿತ ಪುರಾಣ ಕಥೆಗಳನ್ನು ಸಂಗ್ರಹಿಸುವುದು.<br><br>**ಘೋಷಣ ವಾಕ್ಯ ಬರೆಯುವ:**<br>• ನೀರಿನ ಸಂರಕ್ಷಣೆಯ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಘೋಷಣ ವಾಕ್ಯಗಳನ್ನು ಬರೆಯುವುದು . | • ಜಲಮಾಲಿನ್ಯದ ಕುರಿತು ಇರುವ ಸಿಡಿಗಳು<br><br>• ಒಂದೊಂದು ನದಿಯೂ ಒಂದೊಂದು ಕಥೆ– ತಾರಾನಾಥ ವರ್ಕಾಡಿ | • ಲೇಖನ<br><br>• ಸಂಗ್ರಹ<br><br>• ಘೋಷಣ ವಾಕ್ಯ |

## ಯೂನಿಟ್ ಗ್ರಿಡ್

**ಪಾಠ–3 ಕನ್ನಡ ನುಡಿ** **ಸಮಯ: 6 ಪಿರಿಯಡ್‌ಗಳು**

| ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| • ಕವಿತೆಗಳನ್ನು ರಾಗ, ಭಾವ, ತಾಳ ದೊಂದಿಗೆ ಹಾಡಿ ಆಸ್ವಾದಿಸುವುದು.<br>• ಕವಿತೆಯನ್ನು ಭಾವಪೂರ್ಣವಾಗಿ ಉಚ್ಚಾರ ಶುದ್ಧಿಯೊಂದಿಗೆ, ನಿರರ್ಗಳವಾಗಿ ಹಾಡುವುದು.<br>• ಕನ್ನಡನಾಡು, ನುಡಿಯ ಬಗ್ಗೆ ಪ್ರೀತಿ, ಅಭಿಮಾನಗಳನ್ನು ತಾಳುವುದು.<br>• ಕವಿಯು ಕನ್ನಡ ನಾಡು, ನುಡಿಯ ಬಗ್ಗೆ ಹಾಡಿ ಹೊಗಳಿದ್ದನ್ನು ತಿಳಿಯುವುದು.<br>• ಕವಿಯು ಕನ್ನಡ ನುಡಿಯನ್ನು ಯಾವುದಕ್ಕೆಲ್ಲ ಹೋಲಿಸಿದ್ದಾರೆ ಎನ್ನುವುದನ್ನು ತಿಳಿಯುವುದು. | **ಹಾಡುವುದು**<br>• ಕವಿತೆಯನ್ನು ರಾಗವಾಗಿಯೂ, ಭಾವಪೂರ್ಣವಾಗಿಯೂ ಹಾಡುವುದು.<br>• **ಟಿಪ್ಪಣಿ ಬರೆಯುವುದು:** ಕವಿ ಕನ್ನಡ ನಾಡು, ನುಡಿಯನ್ನು ಯಾವುದಕ್ಕೆಲ್ಲಾ ಹೋಲಿಸಿದ್ದಾರೆ ಎಂಬುವುದನ್ನು ಚರ್ಚಿಸಿ ಬರೆಯುವುದು.<br>• **ಸಾಲು ಗುರುತಿಸುವುದು:** ಆಶಯ ಬರುವ ಸಾಲುಗಳನ್ನು ಪದ್ಯಭಾಗದಿಂದ ಗುರುತಿಸಿ ಬರೆಯುವುದು.<br>• **ಪದವಿಂಗಡಿಸುವುದು:** ಕವಿತೆಯಲ್ಲಿ ಬರುವ ಕೆಲವು ಪದಗಳನ್ನು ವಿಂಗಡಿಸಿ ಬರೆಯುವುದು.<br>• **ಸ್ವಾರಸ್ಯ ಬರೆಯುವುದು:** ಪಾಠ ಭಾಗದಲ್ಲಿ ಕೊಟ್ಟಿರುವ ಸಾಲಿನ ಸ್ವಾರಸ್ಯವನ್ನು ಓದಿ ತಿಳಿದು ಚಟುವಟಿಕೆಗಳಲ್ಲಿ ಕೊಟ್ಟಿರುವ ಸಾಲುಗಳ ಸ್ವಾರಸ್ಯವನ್ನು ಬರೆಯುವುದು.<br>• **ಕವನ ರಚಿಸುವುದು:** ಕನ್ನಡ ನಾಡು ನುಡಿಯ ಕುರಿತಾದ ಒಂದು ಕವನವನ್ನು ರಚಿಸಿ ಹಾಡುವುದು.<br>• **ಕವನ ಸಂಗ್ರಹ ಮಾಡುವುದು:** ಕನ್ನಡ ನಾಡು ನುಡಿಯ ಬಗ್ಗೆ ಕೇಳಿದ, ಓದಿದ ಕವನಗಳನ್ನು ಸಂಗ್ರಹಿಸುವುದು. | • ನಾಡಗೀತೆಗಳ ಡಿವಿಡಿ/ಸಿಡಿ | • ಚರ್ಚಾ ಟಿಪ್ಪಣಿ<br>• ಸ್ವಾರಸ್ಯ ಬರಹ<br>• ಕವನ |

**ಪಾಠ 4 ಭಾಗವತರೊಂದಿಗೆ ಸ್ವಲ್ಪ ಹೊತ್ತು** **ಸಮಯ 6 ಪೀರಿಯಡ್**

| ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|
| • ಕರಾವಳಿಯ ಗಂಡುಮೆಟ್ಟಿನ ಕಲೆಯಾದ ಯಕ್ಷಗಾನದ ಬಗ್ಗೆ ತಿಳಿದು ಕೊಳ್ಳುವುದು<br>• ಯಕ್ಷಗಾನದ ವಿವಿಧ ಪ್ರಕಾರಗಳ ಬಗ್ಗೆ ತಿಳಿಯುವುದು<br>• ವೇಷ ಭೂಷಣ, ಹಿಮ್ಮೇಳ, ಮುಮ್ಮೇಳ ಬಣ್ಣಗಾರಿಕೆಯ ಬಗ್ಗೆ ತಿಳಿಯುವುದು.<br>• ಸಂದರ್ಶನದ ರೀತಿಯನ್ನು ತಿಳಿದುಕೊಳ್ಳುವುದು. | • **ಟಿಪ್ಪಣಿ ಬರೆಯುವುದು:**<br>ಯಕ್ಷಗಾನದಲ್ಲಿ ಭಾಗವತರ ಕೆಲಸಗಳ ಬಗ್ಗೆ ಚರ್ಚಿಸಿ ಟಿಪ್ಪಣಿ ಬರೆಯುವುದು.<br>• **ಉತ್ತರ ಬರೆಯುವುದು:**<br>ಪಾಠಭಾಗದ ಸರಳ ಪ್ರಶ್ನೆಗಳಿಗೆ ಉತ್ತರ ಬರೆಯುವುದು.<br>• **ವಿವರಣೆ ಬರೆಯುವುದು:**<br>ಮಕ್ಕಳು ನೋಡಿದ ಯಾವುದಾದರೊಂದು ಯಕ್ಷಗಾನ ಬಯಲಾಟದ ವಿವರಣೆಯನ್ನು ಬರೆಯುವುದು<br>• **ಸಂದರ್ಶನ ನಡೆಸುವುದು:**<br>ಕಲೆ ಮತ್ತು ಕಲಾವಿದರ ಪರಿಚಯ ಮಾಡಿಕೊಳ್ಳಲು ಸೂಕ್ತ ಪ್ರಶ್ನಾವಳಿಯೊಂದನ್ನು ಸಿದ್ಧಪಡಿಸಿಕೊಂಡು ಸಂದರ್ಶನ ನಡೆಸುವುದು.<br>• **ಕಥೆ ಬರೆಯುವುದು:**<br>ಯಕ್ಷಗಾನ ಬಯಲಾಟವನ್ನು ದೃಶ್ಯ–ಶ್ರಾವ್ಯ ಮಾಧ್ಯಮಗಳ ಮೂಲಕ ವೀಕ್ಷಿಸಿ ಪ್ರಸಂಗವನ್ನು ಕಥೆಯಾಗಿ ಬರೆಯುವುದು.<br>• **ಆಲ್ಬಂ ತಯಾರಿಸುವುದು:**<br>ಹಲವು ರೀತಿಯ ಪಾರಿತೋಷಕಗಳ ಚಿತ್ರವನ್ನು ಸಂಗ್ರಹಿಸಿ ಆಲ್ಬಂ ತಯಾರಿಸುವುದು.<br>• **ಸ್ವಂತ ವಾಕ್ಯ ರಚಿಸುವುದು:**<br>ಪಾಠಭಾಗದಲ್ಲಿ ಕೊಟ್ಟ ಸನ್ನಿವೇಶವನ್ನು ಓದಿ ಅಡಿಗೆರೆ ಎಳೆದ ಪದಗಳನ್ನು ಉಪಯೋಗಿಸಿ ಸ್ವಂತ ವಾಕ್ಯರಚಿಸುವುದು. | • ಯಕ್ಷಗಾನ ಸಿಡಿ ವೀಕ್ಷಣೆ<br>• ವಿವಿಧ ಸಂಗೀತೋಪಕರಣ ಸಿಡಿ | • ಟಿಪ್ಪಣಿ<br>• ವಿವರಣೆ<br>• ಸಂದರ್ಶನ ವರದಿ<br>• ಕಥೆ, ಆಲ್ಬಂ<br>• ಸ್ವಂತ ವಾಕ್ಯಗಳು |

# ತೊಟ್ಟಿಲು ಹಾಡು

***ಕವಿ ಪರಿಚಯ***

## ಕೆ.ಎಸ್. ನರಸಿಂಹಸ್ವಾಮಿ

ಮಂಡ್ಯ ಜಿಲ್ಲೆಯ ಕೃಷ್ಣರಾಜ ಪೇಟೆ ತಾಲೂಕಿನ ಕಿಕ್ಕೇರಿಯಲ್ಲಿ ಜನಿಸಿದ ಕೆ.ಎಸ್.ನ. (ಕಿಕ್ಕೇರಿ ಸುಬ್ಬರಾವ್ ನರಸಿಂಹಸ್ವಾಮಿ) ಮೈಸೂರಿನಲ್ಲಿ ಇಂಟರ್ ಮೀಡಿಯಟ್ ಮುಗಿಸಿ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ.ತರಗತಿ ಸೇರಿದರು. ಆದರೆ ಅದನ್ನು ಅರ್ಧದಲ್ಲಿಯೇ ಕೈಬಿಡಬೇಕಾಯಿತು. 1937ರಲ್ಲಿ ಸರಕಾರಿ ಸೇವೆಗೆ ಸೇರಿ 1970ರಲ್ಲಿ ನಿವೃತ್ತರಾದರು.

ಮೈಸೂರು ಮಲ್ಲಿಗೆ ಕೆ.ಎಸ್. ನರಸಿಂಹಸ್ವಾಮಿ ಅವರ ಮೊದಲ ಕವನ ಸಂಕಲನ. ಇದು ಮನೆ ಮನೆಯ ಮಾತಾಗಿ, ಹಾಡಾಗಿ ಹರಿದಿದೆ. ಇದುವರೆಗೂ ಇಪ್ಪತ್ತಕ್ಕೂ ಮಿಕ್ಕಿ ಮುದ್ರಣ ಭಾಗ್ಯ ಪಡೆದಿದೆ. ಕನ್ನಡದ ಕೆಲವೇ ಕೃತಿಗಳಿಗೆ ಇಂಥ ಮರು ಮುದ್ರಣದ ಭಾಗ್ಯ ಲಭಿಸಿದೆ. ಈ ನಡುವೆ ಆಧುನಿಕ ಕನ್ನಡ ಕಾವ್ಯ ಹಲವು ರೂಪಗಳನ್ನು ಪಡೆಯುತ್ತಾ ಬಂದಿದೆ. ಹಲವು ಸಾಹಿತ್ಯ ಚಳುವಳಿಗಳು ಬಂದು ಹೋಗಿವೆ. ಕೆಎಸ್‌ನ ಎಲ್ಲ ಕಾಲಕ್ಕೂ ಸಲ್ಲುವ ಜನ ಪ್ರೀತಿಯು ಕಾವ್ಯ ಕೃಷಿಗೆ ದೊಡ್ಡ ಹೆಸರು. ಕವಿ ವಿಮರ್ಶಕ ಡಾ। ಎಚ್. ಎಸ್. ವೆಂಕಟೇಶ ಮೂರ್ತಿ ಅವರು ಕೆ. ಎಸ್. ನ ಬಗ್ಗೆ ಬರೆಯುತ್ತ ನವೋದಯ ಕಾವ್ಯ ಸಂದರ್ಭದಲ್ಲಿ ಹೆಸರು ಮಾಡಿದ್ದ ಈ ಕವಿ ತಮ್ಮ ಸುಕುಮಾರ ಜಗತ್ತಿನಿಂದ, ನಿಷ್ಠುರವಾದ ಬದುಕಿನ ಸಂದರ್ಭಕ್ಕೆ ಹೊರಳಿದ್ದು "ಶಿಲಾಲತೆ"ಯಲ್ಲಿ. ಆದ್ದರಿಂದ ಈ ಸಂಗ್ರಹಕ್ಕೆ ಒಂದು ಐತಿಹಾಸಿಕ ಮಹತ್ವವಿದೆ– ಎಂದು ದಾಖಲಿದ್ದಾರೆ. ಜತೆಗೆ ಮೈಸೂರು ಮಲ್ಲಿಗೆಯ ಕವಿತೆಯ ಭಾಷೆ, ವಸ್ತು, ಲಯಗಳ ಮೇಲೆ ಇಂಗ್ಲೀಷ್ ಗೀತೆಗಳ ಪ್ರಭಾವವನ್ನು ಗುರುತಿಸಬಹುದು ಎಂದು ಎಚ್. ಎಸ್.ವಿ. ಗುರುತಿಸಿದ್ದಾರೆ.

ಮೈಸೂರು ಮಲ್ಲಿಗೆಯ ಕವಿತೆಗಳನ್ನು ಗಾಯಕರು ಹಾಡಿ ಜನಪ್ರಿಯ ಮಾಡಿದಂತೆ ಆ ಕೃತಿಯನ್ನು ಅಪಾರ ಸಂಖ್ಯೆಯ ಓದುಗರೂ ಕೊಂಡು ಓದಿರುವುದು ಹೆಗ್ಗಳಿಕೆ. ಕೆಲವು ವರ್ಷಗಳ ಹಿಂದೆ ಇದೇ ಹೆಸರಿನಿಂದ ಚಲನಚಿತ್ರವೂ ನಿರ್ಮಾಣವಾಗಿದೆ. ನಾನು ಬರೆದ ಕವಿತೆಗಳು ಪ್ರೇಮ ಕವಿತೆಗಳಲ್ಲ, ದಾಂಪತ್ಯ ಕವಿತೆಗಳೆಂದು ಕೆಎಸ್‌ನ ಹೇಳಿಕೊಂಡಿದ್ದಾರೆ. ಮೈಸೂರು ಮಲ್ಲಿಗೆಯಲ್ಲಿ ಬಹುತೇಕ ಕವಿತೆಗಳು ದಾಂಪತ್ಯ ಗೀತೆಗಳೇ ಆಗಿವೆ. ನವಿಲೂರು, ಹೊನ್ನೂರು ಮೊದಲಾದವು ಗ್ರಾಮ ಬದುಕಿನ ನೆಲೆಗಳು. ಮಣ್ಣಿನ ವಾಸನೆಯ ಅಪ್ಪಟ ಕವಿತೆಗಳನ್ನು ಕೆಎಸ್‌ನ ನೀಡಿದ್ದಾರೆ. ಐರಾವತ, ದೀಪದ ಮಲ್ಲಿ, ಉಂಗುರ, ಇರುವಂತಿಗೆ, ಶಿಲಾಲತೆ, ಮನೆಯಿಂದ ಮನೆಗೆ, ತೆರೆದ ಬಾಗಿಲು, ನವಪಲ್ಲವ ಮುಂತಾದ ಕವನಗಳು ಹೊರ ಬಂದಿವೆ. 'ಮಲ್ಲಿಗೆಯ ಮಾಲೆ' ಸಮಗ್ರ ಕವಿತೆಯ ಸಂಕಲನ. ಸಮಗ್ರ ಸಂಕಲನ ಪ್ರಕಟಗೊಂಡ ಬಳಿಕ ಈಚೆಗೆ 'ಸಂಜೆಹಾಡು'ಎಂಬ ಹೊಸ ಕಾವ್ಯ ಹೊರ ಬಂದಿದೆ.

ಕಾವ್ಯ ಇವರ ಪ್ರಮುಖ ಕೃಷಿಯಾದರೂ ಗದ್ಯದಲ್ಲೂ ಇವರು ಕೃಷಿ ಮಾಡಿದ್ದಾರೆ. ಮಾರಿಯಕಲ್ಲು, ಉಪವನ, ದಮಯಂತಿ ಪ್ರಮುಖ ಕೃತಿಗಳು. ಅಲ್ಲದೆ ಹಲವು ಅನುವಾದಿತ ಕೃತಿಗಳೂ ಬಂದಿವೆ. ಮೋಹನ ಮಾಲೆ, ನನ್ನ ಕನಸಿನ ಭಾರತ, ಪ್ರಪಂಚದ ಬಾಲ್ಯದಲ್ಲಿ, ಮೀಡಿಯ, ಸುಬ್ರಹ್ಮಣ್ಯ ಭಾರತಿ, ಮಾಯಾಶಂಖ ಮತ್ತು ಇತರ ಕತೆಗಳು, ಇವು ಅನುವಾದಿತ ಕೃತಿಗಳು. 1957ರಲ್ಲಿ 'ಶಿಲಾಲತೆ'ಗೆ ರಾಜ್ಯ ಸಂಸ್ಕೃತಿ ಇಲಾಖೆ ಪ್ರಶಸ್ತಿ, 1977ರಲ್ಲಿ 'ತೆರೆದ ಬಾಗಿಲು' ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಲಭಿಸಿವೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರತಿಷ್ಠಿತ ಫೆಲೋಶಿಪ್‌ನ ಗೌರವ ಕೆಎಸ್ ನ ಅವರಿಗೆ 1999ರಲ್ಲಿ ಪ್ರಾಪ್ತವಾಗಿದೆ.

## ಜೀವನ

1915, ಜನವರಿ 26 – ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಕಿಕ್ಕೇರಿಯಲ್ಲಿ ಜನನ

1933 – ಕಬ್ಬಿಗನ ಕೂಗು ಮೊದಲ ಕವನ

1936 – ವೆಂಕಮ್ಮ ಅವರೊಂದಿಗೆ ಮದುವೆ

1937 – ಸರಕಾರಿ ನೌಕರಿ ಆರಂಭ

1942 – ಮೈಸೂರು ಮಲ್ಲಿಗೆ ಕವನ ಸಂಕಲನ ಪ್ರಕಟ

1943 – ದೇವರಾಜ್ ಬಹದ್ದೂರ್ ಬಹುಮಾನ

1957 – ಶಿಲಾಲತೆಗೆ ಮೈಸೂರು ಸಂಸ್ಕೃತಿ ಇಲಾಖೆ ಬಹುಮಾನ

1970 – ಸರಕಾರಿ ನೌಕರಿಯಿಂದ ನಿವೃತ್ತಿ

## ಪಾಠಪ್ರವೇಶ

- ನಿಮ್ಮ ಮನೆಯಲ್ಲಿ ನೀವು ಅತ್ಯಂತ ಹೆಚ್ಚು ಇಷ್ಟ ಪಡುವ ವ್ಯಕ್ತಿ ಯಾರು? ಯಾಕೆ?
- ನೀವು ಸಣ್ಣ ಮಗುವಾಗಿರುವಾಗ ತಾಯಿ ನಿಮ್ಮನ್ನು ಯಾವ ರೀತಿ ಸಲಹಿದ್ದಾರೆ? ನಿಮಗೆ ನೆನಪಿದೆಯೇ?
- ಈ ರೀತಿಯ ಸಂಭಾಷಣೆಯ ಮೂಲಕ ಪಾಠ ಪ್ರವೇಶವನ್ನು ಮಾಡುವುದು.

## ಚಟುವಟಿಕೆಗಳು

### ಹಾಡುವುದು

ಮಕ್ಕಳನ್ನು ಗುಂಪುಗಳನ್ನಾಗಿ ಮಾಡಿ ಪದ್ಯವನ್ನು ರಾಗವಾಗಿ ಹಾಡಿಸುವುದು. ಉಳಿದ ಗುಂಪಿನವರು ಮೌಲ್ಯಮಾಪನ ಮಾಡಲಿ., ಚೆನ್ನಾಗಿ ಹಾಡಿದ ಗುಂಪನ್ನು ಅಭಿನಂದಿಸುವುದು.

### ಸೂಚಕಗಳು

- ♦ ರಾಗ, ತಾಳ,ಲಯಬದ್ಧ
- ♦ ಉಚ್ಚಾರ ಸ್ಪಷ್ಟತೆ
- ♦ ಎಲ್ಲರ ಭಾಗವಹಿಸುವಿಕೆ

ಅನಂತರ ತೊಟ್ಟಿಲ ಹಾಡಿನ ಧ್ವನಿ ಸುರುಳಿಯನ್ನು ಕೇಳಿಸುವುದು. ಆಸಕ್ತ ಮಕ್ಕಳಿಗೆ ಪುನಃ ಹಾಡಲು ಅವಕಾಶ ಕೊಡುವುದು.

### ಕಾರಣ ಬರೆಯುವ

ಮಕ್ಕಳು ಕವಿತೆಯಲ್ಲಿ ತಮಗೆ ಇಷ್ಟವಾದ ಸಾಲುಗಳನ್ನು ಬರೆಯಲಿ. ಯಾಕೆ ಇಷ್ಟವಾಯಿತು? ಎಂಬುದನ್ನು ಬರೆದು ಮಂಡಿಸಲಿ.

### ಸಾಲು ಗುರುತಿಸುವ

ಪಾಠ ಪುಸ್ತಕದಲ್ಲಿ ಕೆಲವು ಆಶಯಗಳನ್ನು ನೀಡಲಾಗಿದೆ. ಅದಕ್ಕೆ ಸರಿ ಹೊಂದುವಂತಹ ಸಾಲುಗಳನ್ನು ಪದ್ಯಭಾಗದಿಂದ ಗುರುತಿಸಿ ಬರೆಯಲಿ.

### ಸಾರಾಂಶ ಬರೆಯುವ

ಮಕ್ಕಳನ್ನು ಗುಂಪುಗಳಾಗಿ ಮಾಡುವುದು. ಪ್ರತಿಯೊಂದು ಗುಂಪಿನವರು ಪದ್ಯದ ಆಶಯದ ಕುರಿತು ಚರ್ಚಿಸಲಿ. ಅನಂತರ ಸಾರಾಂಶ ಬರೆದು ಮಂಡಿಸಲಿ. ಮಕ್ಕಳು ಮೌಲ್ಯ ನಿರ್ಣಯ ಮಾಡಲಿ.

### ಮೌಲ್ಯನಿರ್ಣಯ ಸೂಚಕಗಳು

- ಸಾರ ಸಂಗ್ರಹ
- ಆಶಯ ಸ್ಪಷ್ಟತೆ
- ಭಾಷೆ, ಶೈಲಿ

ಉತ್ತಮವಾಗಿ ಬರೆದ ಗುಂಪನ್ನು ಅಭಿನಂದಿಸುವುದು. ಅನಂತರ ಅಧ್ಯಾಪಕರು ತಾವು ಬರೆದ ಸಾರಾಂಶವನ್ನು ನೀಡುವುದು. ಅದರ ಸಹಾಯದಿಂದ ಮಕ್ಕಳು ತಮ್ಮ ಸಾರಾಂಶ ರಚನೆಯನ್ನು ಉತ್ತಮಪಡಿಸಿ ಬರೆಯಲಿ.

ತಾಯಿಯು ತೊಟ್ಟಿಲನ್ನು ತೂಗುತ್ತಾ ಮಗುವನ್ನು ಮುದ್ದಿನಿಂದ ಚೆಲ್ವಿನ ತೆರೆ, ಮಮತೆಯ ಬಂಧನ, ತೊಟ್ಟಿಲ ಸಿರಿ, ಮುದ್ದಿನ ಗಿಣಿ, ಮುತ್ತಿನ ಮಣಿ, ಇತ್ಯಾದಿಯಾಗಿ ಹೊಗಳುತ್ತಾ 'ಮಲಗಿ ನಿದ್ರಿಸು, ನಿದ್ದೆಯಲಿ ಚಂದಿರನೂರಿಗೆ ಹೋಗಬಹುದು' ಎನ್ನುತ್ತಾಳೆ.

ಚಂದಿರನೂರಿನಲ್ಲಿ ಚಂದಿರನ ತಂಗಿಯರು ನಿನ್ನನ್ನು ಮುತ್ತಿ ತಾರೆಗಳ ಜರಿಯಂಗಿಯನ್ನು ತೊಡಿಸಿ. ಹೂವನ್ನು ಮುಡಿಸಿ, ಹಾಲನ್ನು ಕುಡಿಸಿ ವೀಣೆಯನ್ನು ನುಡಿಸಿ ಮುದ್ದಾಡುವರು. ಹಗಲು ಬಿಳಿಯ ಮುಗಿಲು ಮೇಲೆ ಮೂಡಿ ಬರಲು ನಿನ್ನ ಬಣ್ಣ ಬಣ್ಣದ ಕನಸುಗಳು ಕರಗಿ ಹೋಗಿ ಚಂದಿರನ ತಂಗಿಯುರು ಪಟ್ಟದಾನೆಯ ಮೇಲೆ ಚಿನ್ನದಂಬಾರಿಯಲಿ ನಿನ್ನನ್ನು ಕುಳ್ಳಿರಿಸಿ ಕಳುಹಿಸಬಹುದು.

'ಬೆಳಗಾದಾಗ ನಾನು ನಿನ್ನನ್ನು ಮುದ್ದಿನಿಂದ ಕಂದಾ' ಎಂದು ಕರೆಯಲು ನೀನು ಸುಂದರವಾದ ಕಣ್ಣನ್ನು ತೆರೆಯುವಿ. ಆಗ ನೀನು ಕಂಡ ಕನಸನ್ನು ಕಿವಿಗಿಂಪಾಗಿಸುವಂತೆ ನುಡಿಯಬಹುದು.

### ಸಾರಾಂಶ

ತೊಟ್ಟಿಲು ಹಾಡು ಕವನವನ್ನು ಕವಿಗಳಾದ ಕೆ.ಎಸ್. ನರಸಿಂಹಸ್ವಾಮಿ ರಚಿಸಿದ್ದಾರೆ. ತಾಯಿ ಮಗುವನ್ನು ತೊಟ್ಟಲಲ್ಲಿ ಮಲಗಿಸಿ ಜೋಗುಳ ಹಾಡಿ ನಿದ್ರೆ ಮಾಡಿಸುವ ಸನ್ನಿವೇಶವನ್ನು ಈ ಕವನದಲ್ಲಿ ವರ್ಣಿಸಲಾಗಿದೆ.

"ಮಗು ಹಟ ಮಾಡಬೇಡ ಅಲುಗಾಡದೆ ಮಲಗು, ಸದ್ದಿಲ್ಲದೆ ನಿದ್ದೆ ಬರುತ್ತದೆ. ನೀನು ತೊಟ್ಟಿಲ ಸಿರಿ, ಮುದ್ದಿನ ಗಣಿ ಬೇಗ ನಿದ್ರಿಸಿದರೆ ಕನಸಲ್ಲಿ ಚಂದಿರನ ಊರಿಗೆ ಹೋಗುತ್ತೀಯಾ. ಅಲ್ಲಿ ಚಂದಿರನ ತಂಗಿಯರು ನಿನ್ನ ಸೇವೆ ಮಾಡುತ್ತಾರೆ. ಮತ್ತೆ ಬೆಳಗಾದಾಗ ನಿನ್ನನ್ನು ಚಿನ್ನದಂಬಾರಿಯಲ್ಲಿ ಕಳುಹಿಸುತ್ತಾರೆ. ಆಗ ನಾನು ಬಳಿ ಬಂದು 'ಕಂದಾ' ಎಂದು ಕರೆದು ನಿನ್ನನ್ನು ಎಚ್ಚರಗೊಳಿಸುತ್ತೇನೆ. ಅಲ್ಲಿ ಕಂಡುದನ್ನೆಲ್ಲ ನಿನ್ನದೇ ಮಾತುಗಳಲ್ಲಿ ನಮ್ಮೊಡನೆ ಹೇಳಬಹುದು ಎನ್ನುತ್ತಾ ತಾಯಿ ಮಗುವನ್ನು ನಿದ್ರೆ ಮಾಡಿಸುತ್ತಾಳೆ.

## ಊಹಿಸಿ ಬರೆಯುವ

ನೀವು ಕನಸನ್ನು ಕಾಣುತ್ತೀರಾ? ಎಂದು ಮಕ್ಕಳಲ್ಲಿ ಪ್ರಶ್ನಿಸುವುದು. ಅವರು ಕಂಡ ಕನಸನ್ನು ತಮ್ಮದೇ ವಾಕ್ಯಗಳಲ್ಲಿ ಹೇಳಲು ಅವಕಾಶ ಮಾಡಿಕೊಡುವುದು. ಬಳಿಕ ತಮಗೆ ಕಂಡ ಉತ್ತಮ ಕನಸೊಂದನ್ನು ಸ್ವಂತ ವಾಕ್ಯಗಳಲ್ಲಿ ಬರೆಯಲಿ. ಗುಂಪಿನಲ್ಲಿ ಓದಿ ತಪ್ಪುಗಳನ್ನು ಸರಿಪಡಿಸಿ ಪುನಃ ಬರೆದು ಕನಸಿನ ಸಂಚಿಕೆ ತಯಾರಿಸಲಿ.

## ಸಂಗ್ರಹಿಸುವ

ಮಲಗಿಸುವಾಗ, ತೊಟ್ಟಿಲಲ್ಲಿ ತೂಗುವಾಗ ಹಾಡುವ ಹಾಡುಗಳನ್ನು ಲಾಲಿ ಪದಗಳು, ಜೋಗುಳ ಹಾಡುಗಳು, ತೊಟ್ಟಿಲ ಹಾಡು ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಮಕ್ಕಳು ಹಿರಿಯರಿಂದ, ಪುಸ್ತಕಗಳಿಂದ ಇಂತಹ ಪದ್ಯಗಳನ್ನು ಸಂಗ್ರಹಿಸಿ ಬರೆಯಲಿ.

## ಆಕರ ಗ್ರಂಥಗಳು

1) ಗರತಿಯ ಹಾಡುಗಳು– ಮಾಸ್ತಿ ವೆಂಕಟೇಶ ಅಯ್ಯಂಗಾರ್
2) ಜನಪದ ಜೋಕಾಲಿ
3) ಜನಪದ ಹಾಡುಗಳು
4) ಕೀರ್ತನೆಗಳು

## ಓದುವ

ಕೆ.ಎಸ್. ನರಸಿಂಹ ಸ್ವಾಮಿಯವರು ಬರೆದ ಇತರ ಕವನ ಸಂಕಲನಗಳನ್ನು ಓದುವ ಮೂಲೆಯಲ್ಲಿ ಒದಗಿಸುವುದು. ಮಕ್ಕಳು ಅವುಗಳನ್ನು ಓದಲಿ.

**ಉದಾ : ಮೈಸೂರು ಮಲ್ಲಿಗೆ, ಶಿಲಾಲತೆ, ಮಲ್ಲಿಗೆಯ ಮಾಲೆ.**

## ವಿಶದೀಕರಣ

ಪಚ್ಚೆ – ನವರತ್ನಗಳಲ್ಲಿ ಒಂದಾಗಿದೆ. ಇದನ್ನು ಮರಕತ ಎಂದೂ ಕರೆಯುತ್ತಾರೆ.

## ನವರತ್ನಗಳು

ವಜ್ರ, ಮಾಣಿಕ್ಯ, ಮರಕತ, ಪುಷ್ಯರಾಗ, ನೀಲ, ಗೋಮೇಧಿಕ, ವೈಢೂರ್ಯ, ಮುತ್ತು, ಹವಳ.

## ಹೆಚ್ಚಿನ ಓದಿಗಾಗಿ

### ಜೋಗುಳ ಪದಗಳು

ಏಕಳುವೆ ಎಲೆ ರಂಗ
ಬೇಕಾದ್ದು ನಿನಗುಂಟು
ನಾಕೆಮ್ಮೆ ಕರೆದ ನೊರೆಹಾಲು ಸಕ್ಕರೆ
ನೀ ಕೇಳಿದಾಗ ಕೊಡುವೆನು ॥1॥
ಅತ್ತು ಕಾಡುವನಲ್ಲ
ಮತ್ತೆ ಬೇಡುವನಲ್ಲ
ಎತ್ತಿಕೊಳ್ಳೆಂಬಾ ಹಟವಿಲ್ಲ ॥ ನಿನ್ನಂಥ
ಹತ್ತು ಮಕ್ಕಳು ಇರಬಹುದು. ॥2॥
ಚಂದಿರನು ಇಲ್ಲೆನಗೆ
ತಂದುಕೊಡಬೇಕೆಂದು
ಕಂದ ನೀನತ್ತು ಹೊರಳುವರೆ । ನಿನ್ನಂಥ
ನಂದನನ ಕಾಣೆ ಜಗದೊಳಗೆ
ತೂಗಿರೆ ಬಾಲನ ತೂಗಿರೆ ಕಂದನ
ತೂಗಿರೆ ಮುದ್ದಿನ ಚೆನ್ನಿಗನ।
ತೂಗಿರೆ ವಂಶವ ಬೆಳೆಯಿಪ ಕುವರನ
ತೂಗಿರೆ ಸರ್ವಾಂಗ ಸುಂದರನ
ಅರಳೆಲೆ ಮಾಗಾಯಿ ಕೊರಳ ಪದಕ ಸರ
ಧರಿಸಿದ ತರಳನ ತೂಗಿರೆ।
ಸರಸ ಹೊನ್ನುಂಗುರ ಗುಂಡು
ಬಿಂದಲಿಯಿಂದ
ಮೆರೆಯುವ ಬಾಲನ ತೂಗಿರೆ

## ಅಳಬೇಡ ಕಂದ

ಜೋ ಜೋ ಕಂದ ಅಳಬೇಡ
ಅಮ್ಮನ ಬಾಳಿನ ಮಕರಂದ
ನಿನ್ನಯ ಆಟವು ಬಲುಚಂದ
ಅಳಬೇಡ ಕಂದ ಅಳಬೇಡ
ದೇವಕಿ ಕಂದ ಬಾಲ ಮುಕುಂದ
ನನ್ನಯ ಕಂದ ನೀ ಶ್ರೀಗಂಧ
ನಗುನಗುತ ಕುಣಿದರೆ ಬಲುಚಂದ
ಅಳಬೇಡ ಕಂದ ಅಳಬೇಡ
ಅಜ್ಜ ಬರುವರು ನೋಡಲ್ಲಿ
ಥೈತಕ ಕುಣಿಯುವರು ನಿನ ಕೂಡಿ
ನಗು ಮೊಗದ ಆಟವು ಚೆಲುವಯ್ಯ
ಅಳಬೇಡ ಕಂದ ಅಳಬೇಡ
ಅಜ್ಜಿಯು ಬರುವಳು ಬೆನ್ನ ಬಾಗಿ
ಜೋಗುಳವ ಹಾಡುವಳು ತಲೆ ತೂಗಿ
ಕತೆಯನು ಹೇಳುತ್ತ ನಗಿಸುವಳು
ಅಳಬೇಡ ಕಂದ ಅಳಬೇಡ
ತಂದೆಯು ಬಂದರು ನೋಡಲ್ಲಿ
ತಿಂಡಿಯ ತಂದರು ಬಾ ಇಲ್ಲಿ
ನಗು ನಗುತ ನಲಿಯೊ ನೀನಿಲ್ಲಿ
ಅಳಬೇಡ ಕಂದ ಅಳಬೇಡ !

## ತೂಗುವೆ ತೊಟ್ಟಿಲ

ತೂಗುವೆ ತೊಟ್ಟಿಲ ಜೋಗುಳ ಹಾಡಿ
ಕೂಗದೆ ಮಲಗೆನ್ನ ಮುದ್ದಿನ ಮೋಡಿ, ಜೋ ಜೋ
ತುಂಬಿ ಪವಡಿಸಿತು ಎಸಳ ಹೂಗಳಲಿ
ಗೊಂಬೆ! ನಿನ್ನಯ ಕಣ್ಣಿನೆವೆ ಸೆರೆಗೊಳಲಿ
ರೆಂಬೆ ಚಿಗುರೊಳಡಗಿತು ಪಿಕದುಲಿಯು
ಸೋಂಬನಾಗಲಿ ನಿನ್ನ ತುಟಿ ಚಿಲಿಪಿಲಿಯು
ಜಲದ ಮೇಲ್ ಮಲಗುವ ಮರಿಹಂಸದಂತೆ
ಎಲೆಯೊಳಗಿಹ ಮಲ್ಲಿಗೆಯ ಮೊಗ್ಗಿನಂತೆ
ಚೆಲು ತೊಟ್ಟಿಲಲಿ ಮಲಗು ಅರಗಿಳಿಯೆ
ತಲೆಗಿಂಬಿಗೀಶನ ಕೈ ನಿನ್ನ ಬಳಿಯೆ.

(ಕವಿಶಿಷ್ಯ)

## ಕಾವೇರಿ

ನದಿಗಳು ಜನರ ಜೀವನಾಡಿಗಳಾಗಿವೆ. ಹಲವಾರು ನಾಗರಿಕತೆಗಳು ನದೀದಡಗಳಲ್ಲಿ ರೂಪುಗೊಂಡದನ್ನು ಕಾಣುತ್ತೇವೆ. ಸಿಂಧೂ ನದಿ ನಾಗರಿಕತೆ, ನೇಲ್‌ನದೀ ನಾಗರಿಕತೆ ಇತ್ಯಾದಿ ನಾಗರಿಕತೆಗಳು ಬೆಳೆದು ಬಂದ ಹಾಗೆಲ್ಲ ಹಲವಾರು ನಂಬಿಕೆಗಳು, ಆಚರಣೆಗಳು ಬೆಳೆದು ಬಂದವು. ನದಿಗಳನ್ನು ಜನರು ಪೂಜ್ಯಭಾವನೆಯಿಂದ ಕಾಣುತ್ತಾರೆ. ಋಷಿ ಮುನಿಗಳ ಕಾಲದಿಂದಲೇ ಭಾರತದಲ್ಲಿ ಸಪ್ತ ನದಿಗಳನ್ನು (ಗಂಗೆ, ಯಮುನೆ, ಗೋದಾವರಿ, ಸರಸ್ವತಿ, ನರ್ಮದೆ, ಸಿಂಧೂ, ಕಾವೇರಿ) ಪೂಜ್ಯ ಭಾವನೆಯಿಂದ ಕಾಣಲಾಗುತ್ತಿತ್ತು. ಪಾಠ ಪುಸ್ತಕದಲ್ಲಿ ಕಾವೇರಿ ನದಿಯ ಉಗಮಕ್ಕೆ ಸಂಬಂಧಿಸಿದ ಕತೆಯನ್ನು ಕೊಡಲಾಗಿದೆ.

- ನಮ್ಮ ಜಿಲ್ಲೆಯಲ್ಲಿ ಹರಿಯುವ ನದಿಗಳು ಯಾವುವು?

- ನದಿಗಳಿಂದ ನಮಗಾಗುವ ಪ್ರಯೋಜನಗಳೇನು?
- ನದಿಗಳ ನೀರು ಯಾವ ರೀತಿಯಲ್ಲೆಲ್ಲ ಕಲುಷಿತಗೊಳ್ಳುತ್ತದೆ ಎಂಬುದನ್ನು ಚರ್ಚಿಸುವುದು. ಆ ಬಳಿಕ ಸಪ್ತ ನದಿಗಳಲ್ಲಿ ಒಂದಾದ ಕಾವೇರಿ ನದಿಯ ಕುರಿತಾದ ಪೌರಾಣಿಕ ಕಥೆಯನ್ನು ಪಾಠ ಪುಸ್ತಕದಲ್ಲಿ ಕೊಡಲಾಗಿದೆ. ಅದನ್ನು ನೋಡೋಣ ಎಂದು ಪಾಠ ಪ್ರವೇಶ ಮಾಡಬಹುದು.

## ಚಟುವಟಿಕೆಗಳು

### ಚರ್ಚಿಸುವ

ಮಕ್ಕಳನ್ನು ಗುಂಪುಗಳನ್ನಾಗಿ ಮಾಡುವುದು. ಆ ಗುಂಪುಗಳು ಜಲಕ್ಷಾಮದಿಂದ ಉಂಟಾಗುವ ತೊಂದರೆಗಳ ಬಗ್ಗೆ ಚರ್ಚಿಸಿ ಟಿಪ್ಪಣಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ. ಬರೆದ ಟಿಪ್ಪಣಿಯನ್ನು ಪರಸ್ಪರ ಓದಿ ಪರಿಷ್ಕರಿಸಿ ಬರೆಯಲಿ.

### ಉತ್ತರ ಬರೆಯುವ

ಪಾಠಭಾಗದಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಮಕ್ಕಳು ವೈಯಕ್ತಿಕವಾಗಿ ಉತ್ತರ ಬರೆಯಲಿ. ಬಳಿಕ ತರಗತಿಯಲ್ಲಿ ಓದಲಿ. ಓದಿದ ಉತ್ತರ ಸಮರ್ಪಕವಾಗಿದೆಯೋ ಎಂಬುದನ್ನು ಇತರ ವಿದ್ಯಾರ್ಥಿಗಳು ಚರ್ಚಿಸಿ ತಿಳಿಯಲಿ. ಚರ್ಚೆಯ ಬಳಿಕ ಉತ್ತರವನ್ನು ಉತ್ತಮಪಡಿಸಲು ತಿಳಿಸುವಿರಲ್ಲವೇ ?

### ಊಹಿಸಿ ಬರೆಯುವ

ಅಗಸ್ತ್ಯರು ಸ್ನಾನಕ್ಕೆ ತೆರಳಿದ ಸಂದರ್ಭದಲ್ಲಿ ಕಾಗೆಯು ಕಟ್ಟೆಯ ಮೇಲಿಟ್ಟ ಕಮಂಡಲವನ್ನು ಉರುಳಿಸಿದುದರಿಂದಾಗಿ ಕಾವೇರಿಯು ನದಿಯಾಗಿ ಹರಿದು ಲೋಕಸೇವೆಯನ್ನು ಮಾಡುವಂತಾಯಿತು. ಕಾಗೆಯು ಕಮಂಡಲವನ್ನು ಉರುಳಿಸದೆ ಇರುತ್ತಿದ್ದರೆ ಏನಾಗುತ್ತಿತ್ತು? ಎಂದು ಪ್ರಶ್ನಿಸಿ ಮಕ್ಕಳು ಊಹಿಸಿ ಹೇಳಲು ಅವಕಾಶ ಮಾಡಿಕೊಡುವುದು. ಮಕ್ಕಳು ತಮ್ಮ ಊಹೆಯನ್ನು ಸ್ವಂತ ವಾಕ್ಯಗಳಲ್ಲಿ ಹೇಳಲಿ. ಆ ಬಳಿಕ ಗುಂಪಿನಲ್ಲಿ ಕುಳಿತು ಟಿಪ್ಪಣಿ ಬರೆಯಲಿ. ಬರೆದ ಟಿಪ್ಪಣಿಯನ್ನು ತರಗತಿಯಲ್ಲಿ ಓದಿ ಅಧ್ಯಾಪಕರ ಸಹಾಯದಿಂದ ಉತ್ತಮಪಡಿಸುವುದು. ಒಂದು ಟಿಪ್ಪಣಿ ಹೇಗಿರಬೇಕು ಎಂದು ಪ್ರಶ್ನಿಸಿ ಸೂಚಕಗಳನ್ನು ಕಂಡುಕೊಳ್ಳಲು ಸಹಾಯ ಮಾಡುವುದರೊಂದಿಗೆ ಸ್ವಯಂ ಮೌಲ್ಯನಿರ್ಣಯಕ್ಕೆ ಅವಕಾಶ ಮಾಡಿಕೊಡುವಿರಲ್ಲವೇ?

### ಟಿಪ್ಪಣಿ ಹೇಗಿರಬೇಕು?

- ಸರಳವೂ ಸ್ಪಷ್ಟವೂ ಆಗಿರಬೇಕು
- ಆಶಯಗಳು ಕ್ರಮ ಪ್ರಕಾರವಿರಬೇಕು.
- ಸ್ವಂತಿಕೆ ಇರಬೇಕು
- ವಾಕ್ಯ ರಚನಾ ನಿಯಮಗಳನ್ನು ಪಾಲಿಸಿರಬೇಕು
- ಕುತೂಹಲಕಾರಿಯಾಗಿರಬೇಕು

### ಸಂಭಾಷಣೆ ಬರೆಯುವ

ಪಾಠಭಾಗದಲ್ಲಿ ಕೊಟ್ಟ ಸಂಭಾಷಣೆಯನ್ನು ಮುಂದುವರಿಸಿ ಬರೆಯಬೇಕಾಗಿದೆ. ಅದಕ್ಕಾಗಿ ಮಕ್ಕಳು ಗುಂಪುಗಳಾಗಿ ಸಂಭಾಷಣೆಯ ಬಗ್ಗೆ ಚರ್ಚಿಸಲಿ. ಅಧ್ಯಾಪಕರು ಈ ಕುರಿತು ಸರಳ ಪ್ರಶ್ನೆಗಳನ್ನು ಕೇಳುವುದು.

1. ಕವೇರ ರಾಜನು ಎಲ್ಲಿ ಆಳ್ವಿಕೆ ಮಾಡುತ್ತಿದ್ದನು?
2. ಕವೇರ ರಾಜನಿಗೆ ವರವನ್ನು ಕೊಟ್ಟವರು ಯಾರು?
3. ಬ್ರಹ್ಮನು ಕವೇರ ರಾಜನಿಗೆ ಯಾವ ವರವನ್ನು ಕೊಟ್ಟನು?

ಇತ್ಯಾದಿ ಪ್ರಶ್ನೆಗಳನ್ನು ಕೇಳುತ್ತಾ, ಮಕ್ಕಳನ್ನು ಸಂಭಾಷಣೆ ಬರೆಯಲು ಪ್ರೇರೇಪಿಸುವುದು. ಅನಂತರ ಮಕ್ಕಳು ಸಂಭಾಷಣೆಯನ್ನು ಬರೆದು ತರಗತಿಯಲ್ಲಿ ಮಂಡಿಸಲಿ. ಮಕ್ಕಳು ಗುಂಪಿನಲ್ಲಿ ನಿರ್ಣಯ ಮಾಡಲಿ. ಮೌಲ್ಯ ನಿರ್ಣಯದ ಆಧಾರದಲ್ಲಿ ಮಕ್ಕಳು ತಮ್ಮ ಸಂಭಾಷಣೆಯನ್ನು ಪರಿಷ್ಕರಿಸಿ ಬರೆಯಲಿ.. ನೀವು ಬರೆದ ಮಾದರಿ ಸಂಭಾಷಣೆಯನ್ನು ತರಗತಿಯಲ್ಲಿ ಪ್ರದರ್ಶಿಸುವಿರಲ್ಲವೇ?

### ಲೇಖನ ಬರೆಯುವ

ನಿಮ್ಮ ಊರಲ್ಲಿರುವ ನದಿಗಳು ಯಾವುವು? ನದಿಯಿಂದ ನಿಮಗಿರುವ ಪ್ರಯೋಜನಗಳೇನು? ನದಿ ಮಲೀನಗೊಳ್ಳುವುದು ಹೇಗೆ? ಇದನ್ನು ಹೇಗೆ ತಡೆಯಬಹುದು ಇತ್ಯಾದಿ ಪ್ರಶ್ನೆಗಳನ್ನು ವಿದ್ಯಾರ್ಥಿಗಳಲ್ಲಿ ಕೇಳುತ್ತಾ ನದಿಯು ನಮಗೆ ಹೇಗೆ ಜೀವನಾಧಾರವಾಗಿದೆ ಎಂಬ ತಿಳುವಳಿಕೆಯನ್ನು ಮಾಡಿಸುವುದು. ಅ ಬಳಿಕ ವೈಯಕ್ತಿಕವಾಗಿ/ಗುಂಪಿನಲ್ಲಿ ನದಿಯ ಕುರಿತು ಲೇಖನ ಬರೆಯಲಿ. ಬರೆದ ಲೇಖನಕ್ಕೆ ಸೂಕ್ತ ಶೀರ್ಷಿಕೆಯನ್ನೂ ನೀಡಲಿ. ಲೇಖನವನ್ನು ಸೂಕ್ತ ಸೂಚಕಗಳ ಆಧಾರದಲ್ಲಿ ಮೌಲ್ಯ ನಿರ್ಣಯ ಮಾಡಿ ಪರಿಷ್ಕರಿಸಿ ಬರೆಯಲು ಹೇಳುವಿರಲ್ಲವೇ?

**ಸೂಚಕಗಳು ಏನೆಲ್ಲಾ?**

- ಸಮರ್ಪಕವಾದ ಶೀರ್ಷಿಕೆ
- ಉತ್ತಮವಾದ ಆರಂಭ
- ಸಮರ್ಪಕವಾದ ವಿವರಣೆ
- ಆಶಯ ಕ್ರಮೀಕರಣ
- ಯೋಗ್ಯವಾದ ಮುಕ್ತಾಯ
- ಭಾಷಾ ಶೈಲಿ

### ಸಂಗ್ರಹಿಸಿ ಬರೆಯುವ

ನದಿಗಳಿಗೆ ಸಂಬಂಧಿಸಿ ಹಲವಾರು ಕಥೆಗಳಿವೆ. ಗಂಗಾ ನದಿಯು ನಮ್ಮ ದೇಶದ ಪುರಾಣ ಪ್ರಸಿದ್ಧ ನದಿಯಾಗಿದೆ. ಈ ನದಿಯ ಕುರಿತಾಗಿರುವ ಯಾವುದಾದರೂ ಒಂದು ಕಥೆಯನ್ನು ಓದುವ ಮೂಲೆಯಿಂದ ಸಂಗ್ರಹಿಸಿ ಬರೆಯಿರಿ.

## ಗಂಗಾನದಿ

ಭಾರತದ ಪ್ರಸಿದ್ಧ ನದಿಗಳಲ್ಲೊಂದಾದ ಗಂಗಾನದಿಯ ಪೌರಾಣಿಕ ಹಿನ್ನೆಲೆಯ ಕಥೆ ಹೀಗಿದೆ

ಗಂಗೆ ಹಿಮವಂತನ ಪುತ್ರಿ, ಸುರಲೋಕದವರ ಅಮೃತ. ಇವಳನ್ನು ಭೂಲೋಕದಲ್ಲಿ ನದಿಯಾಗಿ ಹರಿಯುವಂತೆ ಮಾಡಿದವನು ಭಗೀರಥನೆಂಬ ಇಕ್ಷ್ವಾಕು ದೊರೆ. ಸಗರನೆಂಬ ಚಕ್ರವರ್ತಿಯ ಅರುವತ್ತು ಸಾವಿರ ಮಕ್ಕಳು ಕಪಿಲನೆಂಬ ಮುನಿಯ ಕೋಪಾಗ್ನಿಗೆ ಆಹುತಿಯಾಗಿ ಸುಟ್ಟು ಹೋದರು. ಈ ಬೂದಿಯನ್ನು ಗಂಗೆ ತೋಳಿದರೆ ಮಾತ್ರವೇ ಅವರಿಗೆ ಸದ್ಗತಿ ದೊರೆಯುವುದು ಎಂದು ಗೊತ್ತಾಯಿತು. ಆಗ ಅವರ ಮರಿಮಗನಾದ ಭಗೀರಥನೆಂಬವನು ತಮ್ಮ ಮುತ್ತಜ್ಜಂದಿರಿಗೆ ಸದ್ಗತಿಯುಂಟುಮಾಡಬೇಕೆಂಬ ಹಠದಿಂದ ಗಂಗೆಯನ್ನು ಭೂಲೋಕಕ್ಕೆ ತರಲು ಶಪಥ ಮಾಡಿ ಘೋರ ತಪಸ್ಸನ್ನು ಮಾಡಿದನು.

ಗಂಗಾದೇವಿ ಪ್ರತ್ಯಕ್ಷಳಾಗಿ 'ಮಗನೇ ನಿನ್ನ ಅಭೀಷ್ಟವೇನು?' ಎಂದು ಕೇಳಿದಳು. ಭಗೀರಥನು ನಡೆದ

ವೃತ್ತಾಂತವನ್ನೆಲ್ಲಾ ತಿಳಿಸಿ 'ನನ್ನ ಮುತ್ತಾತಂದಿರಿಗೆ ಸದ್ಗತಿ ಉಂಟಾಗಲು ಭೂಲೋಕಕ್ಕೆ ಹರಿದು ಬರಬೇಕು' ಎಂದು ಕೇಳಿಕೊಂಡನು. ಗಂಗೆ ಒಪ್ಪಿದಳಾದರೂ ಭಗೀರಥನನ್ನು ಕುರಿತು 'ಮಗನೇ ನಿನ್ನ ಇಷ್ಟಾರ್ಥವನ್ನು ಕೈಗೂಡಿಸುವೆನು. ಆದರೆ ನಾನು ಆಕಾಶದಿಂದ ಧುಮುಕುವ ರಭಸವನ್ನು ತಡೆಯುವವರು ಯಾರು?'ಎನ್ನಲು ಭಗೀರಥನು ಶಿವನನ್ನು ಕುರಿತು ತಪಸ್ಸು ಮಾಡಿ ಗಂಗೆಯ ರಭಸವನ್ನು ತಡೆಯಲು ಅವನನ್ನು ಒಪ್ಪಿಸಿದನು. ಗಂಗೆ ಶಿವನ ಮಸ್ತಕದ ಮೇಲೆ ಬಿದ್ದು ಅಲ್ಲಿಂದ ಭಗೀರಥನು ಕರೆದುಕೊಂಡು ಹೋದ ದಾರಿಯಲ್ಲಿ ಅತ್ಯಂತ ವೇಗದಿಂದ ಹರಿಯ ತೊಡಗಿದಳು. ದಾರಿಯಲ್ಲಿ ' ಜಹ್ನು' ಎಂಬ ಋಷಿಯ ಆಶ್ರಮವಿತ್ತು. ಗಂಗೆಯ ರಭಸಕ್ಕೆ ಆ ಋಷಿಯ ಆಶ್ರಮವು ಕೊಚ್ಚಿಕೊಂಡು ಹೋಯಿತು. ಆಗ ಜಹ್ನುವು ಕೋಪದಿಂದ ಗಂಗೆಯ ಅಪಾರ ಜಲರಾಶಿಯನ್ನು ಒಂದೇ ಗುಟುಕಿಗೆ ಕುಡಿದನು. ಆಗ ಭಗೀರಥನು ಜಹ್ನು ಋಷಿಯನ್ನು ಪ್ರಾರ್ಥಿಸಿ, ಪುನಃ ಆ ಮಹರ್ಷಿಯ ಕಿವಿಯ ಮೂಲಕ ಗಂಗೆಯನ್ನು ಹರಿದು ಬರುವಂತೆ ಮಾಡಿದನು. ಈ ಕಾರಣದಿಂದಲೇ ಗಂಗೆಗೆ ಜಾಹ್ನವಿ ಎಂದು ಹೆಸರು ಬಂತು. ಅನಂತರ ಭಗೀರಥನು ಗಂಗೆಯನ್ನು ಕರೆದೊಯ್ದು ತನ್ನ ಮುತ್ತಾತಂದಿರ ಚಿತಾಭಸ್ಮದ ಮೇಲೆ ಹರಿಸಿ ಅದು ಕೊಚ್ಚಿಕೊಂಡು ಹೋಗುವಂತೆ ಮಾಡಿ ಅವರಿಗೆ ಸದ್ಗತಿಯನ್ನುಂಟು ಮಾಡಿದನು. ಈ ಕಾರಣದಿಂದ ಈಕೆಗೆ 'ಭಾಗೀರಥಿ' ಎಂದು ಹೆಸರಾಯಿತು.

## ಹೇಮಾವತಿ ನದಿ

ದಾಕ್ಷಾಯಿಣಿ ದಕ್ಷನ ಮಗಳು. ಒಮ್ಮೆ ದಕ್ಷನು ಮಹಾಯಜ್ಞವನ್ನು ಮಾಡಿದನು. ಆಗ ಅವನು ತನ್ನ ಮಗಳು ದಾಕ್ಷಾಯಿಣಿಯನ್ನಾಗಲಿ, ಅವಳ ಪತಿ ಶಿವನನ್ನಾಗಲಿ ಯಜ್ಞಕ್ಕೆ ಆಮಂತ್ರಿಸಲಿಲ್ಲ. ಇದರಿಂದ ನೊಂದ ದಾಕ್ಷಾಯಿಣಿ ತಂದೆಯು ಯಜ್ಞ ಮಾಡುವೆಡೆಗೆ ಹೋದಳು. ತನ್ನ ಪತಿಯನ್ನು ಯಜ್ಞಕ್ಕೆ ಆಹ್ವಾನಿಸದಿದ್ದುದಕ್ಕೆ ಕಾರಣ ಕೇಳಿದಳು. ಆಗ ದಕ್ಷನು ಶಿವನನ್ನು ಹೀಯಾಳಿಸಿದನು.

ತನ್ನ ಪತಿಯನ್ನು ಹೀಯಾಳಿಸಿದುದನ್ನು ಸಹಿಸದ ದಾಕ್ಷಾಯಿಣಿ ಅಗ್ನಿ ಪ್ರವೇಶ ಮಾಡಿದಳು. ಅಗ್ನಿ ಅವಳನ್ನು ಮೇಲೆತ್ತಿದಾಗ ಅವಳು ಸ್ವರ್ಣದಂತೆ ಹೊಳೆದಳು. ಈ ಕಾರಣದಿಂದ ದಾಕ್ಷಾಯಿಣಿಗೆ ಹೇಮಾವತಿ ಎಂಬ ಹೆಸರು ಬಂತು. ಬಳಿಕ ಶಿವನ ಆಜ್ಞೆಯಂತೆ ಅವಳು ನದಿಯಾಗಿ ಹರಿದಳು.

ಹೇಮಾವತಿ ನದಿ ಕರ್ನಾಟಕದ ಮುಖ್ಯ ನದಿ. ಮಂಗಳೂರಿನ ಮೂಡಿಗೆರೆ ತಾಲೂಕಿನ ಮಲಬಂಗಾಡಿಯ ಜಾವಳಿಯಲ್ಲಿ ಹುಟ್ಟಿ ದಕ್ಷಿಣಾಭಿಮುಖವಾಗಿ ಹರಿಯುತ್ತದೆ. ಇದರ ಒಟ್ಟು ಉದ್ದ 258 ಕಿ.ಮೀ. ಈ ನದಿ ಕೃಷ್ಣರಾಜ ಸಾಗರದ ಬಳಿ ಕಾವೇರಿ ನದಿಯನ್ನು ಸೇರುತ್ತದೆ.

### ಘೋಷಣ ವಾಕ್ಯ ಬರೆಯುವ

ನೀರು ಅಮೂಲ್ಯವಾಗಿದ್ದು, ಅದನ್ನು ಸಂರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಇಂದಿನ ದಿನಗಳಲ್ಲಿ ಹಲವು ರೀತಿಗಳಲ್ಲಿ ಮಲಿನಗೊಳ್ಳುತ್ತಿರುವ ನೀರನ್ನು ಸಂರಕ್ಷಣೆ ಮಾಡುವುದರ ಕುರಿತು ಜನ ಜಾಗೃತಿ ಮೂಡಿಸಬೇಕಾಗಿದೆ. ಅದಕ್ಕಾಗಿ ಸೂಕ್ತವಾದ ಘೋಷಣ ವಾಕ್ಯಗಳನ್ನು ತಯಾರಿಸಲಿ.

**ಹಾಳು ಮಾಡಿದರೆ ಜಲ ಸಂಪತ್ತು**
**ನಾಶವಾಗುವುದು ಜೀವ ಸಂಪತ್ತು**

**ಜಲ ಅಮೂಲ್ಯ**
**ಕಳೆಯದಿರಿ ಅದರ ಮೌಲ್ಯ**

**ಮಲಿನಗೊಳಿಸದಿರಿ ನೀರು**
**ಹಾಳು ಮಾಡದಿರಿ ಊರು**

**ಮಾಡಿದರೆ ಜಲಮಾಲಿನ್ಯ**
**ಬರುವುದು ಚಿಕೂನ್‌ಗುನ್ಯಾ**

**ಕೆಡಿಸದಿರಿ ಜಲ**
**ಕೊಲ್ಲದಿರಿ ಜೀವಜಾಲ**

**ಹೆಚ್ಚಿನ ಓದಿಗಾಗಿ**

## ಭಗೀರಥ

ಸೂರ್ಯವಂಶದ ಸಗರ ಮಹಾರಾಜನಿಗೆ ಅರುವತ್ತು ಸಾವಿರ ಮಕ್ಕಳಿದ್ದರು. ಅವರೆಲ್ಲ ಕಪಿಲಮುನಿಯ ಕೋಪಕ್ಕೆ ತುತ್ತಾಗಿ ಭಸ್ಮವಾದರು. ಪಾಪನಾಶಿನಿಯಾದ ದೇವಗಂಗೆಯಿಂದ ಅವರ ಭಸ್ಮವನ್ನು ತೋಯಿಸಿದರೆ ಅವರಿಗೆ ಸದ್ಗತಿ ಪ್ರಾಪ್ತಿಯಾಗುತ್ತಿತ್ತು. ಆದರೆ ಸ್ವರ್ಗದರ್ಲಿಲುರವ ಗಂಗಾದೇವಿಯನ್ನು ಪಾತಾಳಕ್ಕೆ ಇಳಿಸುವವರಾದರೂ ಯಾರು? ಸಗರನ ಮೊಮ್ಮಗನಾದ ಅಂಶುಮನ್ತನಿಗೆ ತನ್ನ ಜೀವಿತಾವಧಿಯಲ್ಲಿ ಪಿತೃಗಳಿಗೆ ಸದ್ಗತಿ ದೊರಕಿಸಲಾಗಲಿಲ್ಲ.

ಬಹಳ ವರುಷಗಳು ಸಂದವು. ಅದೇ ಸೂರ್ಯವಂಶದಲ್ಲಿ ಅಸಮಂಜಸ, ಅಂಶುಮನ್ತ. ದಿಲೀಪ ಮೊದಲಾದ ರಾಜರು ಆಗಿ ಹೋದರು. ಆದರೆ ದೇವಗಂಗೆಯನ್ನು ಧರೆಗಿಳಿಸಲು ಅಸಮರ್ಥರಾದರು. ಅದರೊಂದಿಗೆ ಪಿತೃಗಳಿಗೆ ಸದ್ಗತಿ ದೊರೆಯಲಿಲ್ಲವೆಂಬ ಕಳಂಕವೊಂದು ಇಡೀ ವಂಶಕ್ಕೆ ತಟ್ಟಿತು. ಅಂಥ ಪುಣ್ಯಾತ್ಮನೊಬ್ಬನ ಹುಟ್ಟಿಗಾಗಿ ಮನೆತನ ಕಾಯುತ್ತಿತ್ತು.

ಧರ್ಮಾತ್ಮನಾದ ದಿಲೀಪನಿಗೆ ಭಗೀರಥನೆಂಬ ಮಗನಿದ್ದನು. ಬಾಲ್ಯದಲ್ಲಿಯೇ ಸಂಸ್ಕಾರವಂತನಾಗಿ ಬೆಳೆಯುತ್ತಿದ್ದ ಈತನೆ ವಂಶಕ್ಕಂಟಿದ ಕಳಂಕವನ್ನು ನಿವಾರಿಸುತ್ತಾನೆ ಎಂಬ ನಿರೀಕ್ಷೆ ಯಾರಿಗೂ ಇರಲಿಲ್ಲ. ದೇವಲೋಕದ ನದಿಯನ್ನು ಭೂಲೋಕದ ಮೂಲಕ ಕೆಳಲೋಕಕ್ಕೆ ಒಯ್ಯುವುದು ಅದೇನು ಸುಲಭದ ಕೆಲಸವೆ? ಅಸಾಮಾನ್ಯ ವ್ಯಕ್ತಿತ್ವವುಳ್ಳವರಿಗೆ ಮಾತ್ರ ಅದು ಸಾಧ್ಯ. ತನ್ನ ಪ್ರಪಿತಾಮಹರಿಗೆ ಒದಗಿದ ದುರವಸ್ಥೆಯನ್ನು ತಂದೆಯಿಂದ ತಿಳಿದ ಬಾಲಕ ಭಗೀರಥ ದುಃಖಿಯಾದನು. ಹೇಗಾದರೂ ಗಂಗಾದೇವಿಯನ್ನು ಧರೆಗಿಳಿಸಿ ತನ್ನ ಹಿರಿಯರಿಗೆ ಸದ್ಗತಿಯನ್ನು ಒದಗಿಸಿ ಕೊಳೆಯನ್ನು ತೊಳೆಯುವ ಸಂಕಲ್ಪ ಮಾಡಿದನು.

ಹಿರಿಯರಿಂದ ಆಶೀರ್ವಾದ ಪಡೆದು ಹಿಮಾಲಯ ಪರ್ವತ ಪ್ರದೇಶವನ್ನು ಸೇರಿ ಪರಿಶುದ್ಧನಾಗಿ ಗಂಗಾಮಾತೆಯನ್ನು ಕುರಿತು ಘೋರ ತಪಸ್ಸನ್ನು ಆಚರಿಸಿದನು. ಭಗೀರಥನ ಭಕ್ತಿಗೆ ಮೆಚ್ಚಿದ ಗಂಗಾದೇವಿ ಪ್ರತ್ಯಕ್ಷಳಾದಳು. ಸಾಕ್ಷಾತ್ ಪಾಪನಾಶಿನಿಯನ್ನು ಸಾಕ್ಷ್ಯತ್ಕರಿಸಿಕೊಳ್ಳುವುದು ಸಾಮಾನ್ಯ ಸಂಗತಿಯೆ?

ಭಗೀರಥನು ಕಣ್ತೆರದು, ಗಂಗಾದೇವಿಗೆ ಭಕ್ತಿಯಿಂದ ಕೈ ಮುಗಿದು ತನ್ನ ತಪಸ್ಸಿನ ಧ್ಯೇಯವನ್ನು ಹೇಳಿಕೊಂಡನು. ಆಗ ಗಂಗಾದೇವಿಗೆ ಒಪ್ಪದೆ ವಿಧಿಯಿಲ್ಲ. ವಿಷ್ಣುವಿನ ಪಾದಮೂಲದಿಂದ ಜನಿಸಿ ಸ್ವರ್ಗವನ್ನೇ ನೆಲೆಯಾಗಿಸಿದರೂ ಭಕ್ತನೊಬ್ಬನ ಕೇಳಿಕೆಗೆ ನಿರಾಕರಿಸುವಂತಿಲ್ಲ.

“ನಾನು ಪಾತಾಳ ಸೇರಬೇಕಾದರೆ ಭೂಮಿಯ ಮೂಲಕ ಹಾದು ಹೋಗಬೇಕು. ನಾನು ಜಲಪಾತ ರೂಪದಿಂದ ಭೂಮಿಗೆ ಇಳಿಯುವ ರಭಸಕ್ಕೆ

ಭೂಮಂಡಲವೇ ನುಚ್ಚುನೂರಾಗಬಹುದು. ನಾನು ಆಗಸದಿಂದ ಧುಮುಕುವಾಗ ನನ್ನ ವೇಗವನ್ನು ತಡೆಯುವ ವ್ಯವಸ್ಥೆ ಮಾಡಿದರೆ ನಾನು ಬರುತ್ತೇನೆ" ಎಂದಳು ಗಂಗೆ.

"ಆದೀತು ಆದರೆ ಕೇವಲ ಮನುಷ್ಯನಾದ ನನ್ನಿಂದ ನಿನ್ನನ್ನು ಆಧರಿಸಲು ಸಾಧ್ಯವಿಲ್ಲ. ನೀನೇ ದಾರಿತೋರಬೇಕು" ಎಂದನು ಭಗೀರಥ. "ನೀನು ಶಿವನನ್ನು ಒಲಿಸು. ಅವನೇ ದಾರಿತೋರುತ್ತಾನೆ" ಎಂದು ಹರಸಿ ಗಂಗೆ ಅಂತರ್ಧಾನಳಾದಳು.

ಗಂಗೆಯನ್ನು ಒಲಿಸಿಕೊಂಡಾಯಿತು. ಈಗ ಶಿವನನ್ನು ಕುರಿತು ತಪಸ್ಸು ಮಾಡಬೇಕು. ಭಗೀರಥನ ಪ್ರಪಂಚ ತಪಸ್ಸಿಗೆ ಹರನೊಲಿದು ಕಾಣಿಸಿಕೊಂಡನು. ಭಗೀರಥನು ತನ್ನ ಉದ್ದೇಶವನ್ನು ಶಿವನಲ್ಲಿ ನಿವೇದಿಸಿದನು. ಈಶ್ವರನು 'ತಥಾಸ್ತು' ಅಂದನು.

ಅಂದು ದೇವನದಿ ಭೂಮಿಗೆ ಧುಮುಕುವ ದಿನ. ಹದಿನಾಲ್ಕು ಲೋಕದ ಮಂದಿಯೂ ಈ ಅಪೂರ್ವ ದೃಶ್ಯವನ್ನು ಕಾಣಲು ಆಗಸದಲ್ಲಿ ನೆರೆದಿದ್ದರು. ಗಂಗಾದೇವಿ ಭೂಮಿಗೆ ಜಿಗಿಯುತ್ತಿದಂತೆ ಶಿವ ತನ್ನ ಜಡೆಯನ್ನು ಒಡ್ಡಿ ಆಕೆಯನ್ನು ಬಂಧಿಸಿದ. ಅವನಿಗೆ ಗಂಗಾಧರನೆಂಬ ಹೆಸರು ಬಂತು. ವಿಷ್ಣುಪುತ್ರಿಯನ್ನು ತಡೆಯಲು ಶಿವನಿಂದಲ್ಲದೆ ಇನ್ನಾರಿಂದ ನಿಧಾನವಾಗಿ ಭೂಮಿಯ ಮೇಲೆ ಹರಿಯತೊಡಗಿದಳು. ಮಂದವಾಗಿಹರಿಯುತ್ತಿದ್ದ ಆಕೆಗೆ ಮಂದಾಕಿನಿ ಎಂಬ ಹೆಸರೂ ಬಂತು.

ಪಾತಾಳಕ್ಕೆ ಇಳಿಯುವಾಗ ಹಾದಿಯಲ್ಲಿ ಜಹ್ನು ಮಹರ್ಷಿಗಳ ಆಶ್ರಮ ಕೊಚ್ಚಿಹೋಯಿತು. ಅದರಿಂದ ಕ್ರುದ್ಧರಾದ ಋಷಿಗಳು ಗಂಗೆಯನ್ನು ಒಂದೇ ಗುಟುಕಿಗೆ ಕುಡಿದು ಬಿಟ್ಟರು.

ಪಾತಾಳವರೆಗೆ ತಂದರೂ ತನ್ನ ಪಿತೃಗಳ ಭಸ್ಮದ ಬಳಿಗೆ ಒಯ್ಯಲಾಗಲಿಲ್ಲವಲ್ಲ ಎಂದು ಭಗೀರಥ ಪರಿತಪಿಸಿದನು. ಆದರೂ ಹಿಡಿದ ಛಲ ಬಿಡಲಿಲ್ಲ. ಜಹ್ನು ಮಹರ್ಷಿಯನ್ನು ಭಕ್ತಿಯಿಂದ ಸ್ತುತಿಸಿದನು. ಋಷಿಗಳು ಸುಪ್ರೀತರಾದರು. ಆತನ ಕಾರ್ಯದ ಉದ್ದೇಶವನ್ನು ತಿಳಿದು ತನ್ನ ಕಿವಿಗಳಲ್ಲಿ ದೇವಗಂಗೆಯನ್ನು ಹರಿಯಬಿಟ್ಟರು. ಮುಂದೆ ಗಂಗಾದೇವಿ ಸಂಭ್ರಮದಿಂದ ಹರಿಯುತ್ತ ಸಗರಪುತ್ರರ ಭಸ್ಮರಾಶಿಯನ್ನು ತೋಯಿಸಿದಳು. ಅವರಿಗೆ ಸದ್ಗತಿ ಲಭಿಸಿತು.

ಭಗೀರಥ ಅಡೆತಡೆಗಳ ನಡುವೆಯೂ ದೇವನದಿಯನ್ನು ಭೂಮಿಯ ಮೂಲಕ ಪಾತಾಳಕ್ಕೆ ಇಳಿಸಿ ತನ್ನ ಪೂರ್ವಜರಿಗೆ ಸದ್ಗತಿಯನ್ನು ಒದಗಿಸಿದ. ಪ್ರಯತ್ನಶೀಲತೆಗೆ ಇನ್ನೊಂದು ಹೆಸರು – ಭಗೀರಥ.

ಭಗೀರಥನ ಪ್ರಯತ್ನದಿಂದ ಇಂದು ಗಂಗೆ ಸ್ವರ್ಗ – ಮರ್ತ್ಯ ಪಾತಾಳ (ಹಿಮಾಲಯ ಭೂಮಿ – ಬಂಗಾಳಕೊಲ್ಲಿ) ಗಳಲ್ಲಿ ಹರಿಯುತ್ತಿದ್ದಾಳೆ.

## ಜಲಲ ಜಲಲ ಜಲಧಾರೆ

ಜಲಲ ಜಲಲ ಜಲಧಾರೇ
ಜಲಲ ಜಲಲ ಜಲಧಾರೆ
ಓಹೊಹೋ..... ಓಹೋ....
ಸುವ್ವಿ ಸುವ್ವಾಲೆ ಸೋಲೇ
ದೋಣಿ ದುವ್ವಾಲೆ ಮೇಲೇ
ಜಾಣೆ ಜನ್ನೇರ ಜೋಲೇ
ಆಹಾ ಆಹಾ ಆಹಾ ಓಹೋಹೋ
ಆಹಾ ಆಹಾ ಆಹಾ ಓಹೋಹೋ..... ।।ಜಲಲ।।

ನನ್ನ ಜತೆಯಾಗಿ
ಹಾಡು ಹಾಯಾಗಿ ಕೋಗಿಲೇ
ಮಾಗೀ ಕೋಗಿಲೇ

ತಾಳ ಹಿಮ್ಮೇಳ, ಮೇಳ ಮುಮ್ಮೇಳ
ನೀರಲೇ, ನವಿಲೆ ಆಡಲೇ
ಬಿಂಕ ಬಿನ್ನಾಣ, ಬೆಡಗು ಬಿಗುಮಾನ
ಬಲ್ಲೆ, ಅಂಬಾಲೆ ಬಾಲೆ
ಅಂಬು ಕಣ್ಣೋಟ
ತುಂಬು ಮೈಮಾಟ ಮಂಚಲೇ
ಚೆಲುವೇ ಚಂಚಲೇ।।
ಬೃಂಗ – ಸಾರಾಂಗ, ಸಿಂಗ – ಮಾತಂಗ ನಾಗಲೇ
ನಲವೇ ನೀನೆಲ್ಲೇ –
ಹಂಸ ನಡೆದಂತೆ ಹೊನಲು ಹರಿದಂತೆ
ಹಾಯಿ ಹರಿಗೋಲ ಲೀಲೆ
ಓಹೋಹೋ....... ಓಹೋ.... ಸುವ್ವಿ ಸುವ್ವಾಲೆ ಸೋಲೇ
ದೋಣಿ ದುವ್ವಾಲೆ ಮೇಲೆ
ಜಾಣೆ ಜನ್ನೇರ ಜೋಲೇ ।।
ಜಲಲ ಜಲಲ ಜಲಧಾರೆ ।।

**– ಆರ್.ಎನ್. ಜಯಗೋಪಾಲ್**

## ಕನ್ನಡ ನಾಡಿನ ಜೀವನದಿ ಕಾವೇರಿ

ಗಂಗೆಯ ತುಂಗೆಯ .... ಪ್ರೀತಿಯ ಸೋದರಿ
ಪಾವನಿ ಪುಣ್ಯ ನದಿ
ಬಳುಕುತ ಕುಲುಕುತ... ಹರುಷವ ಚೆಲ್ಲುತ
ಸಾಗುವ ಪುಣ್ಯನದಿ
ತಾ ಇಟ್ಟ ಹೆಜ್ಜೆಗೆ..... ಅಮೃತ ಹರಿಸಿ
ಕಾಯುವ ಭಾಗ್ಯ ನಿಧಿ।।
ಕನ್ನಡ ನಾಡಿನ ಜೀವನದಿ ಕಾವೇರಿ ....
ಜೀವನದಿ .... ಈ ಕಾವೇರಿ....
ಅನ್ನವ ನೀಡುವ ದೇವನದಿ ಈ ವೈಯಾರಿ
ಜೀವನದಿ .... ಈ .....ವೈಯಾರಿ
ಈ ತಾಯಿಯು ನಕ್ಕರೆ.... ಸಂತೋಷದ ಸಕ್ಕರೆ
ಮಾಯದಾ ಮಾಯೆಗೆ..... ಭಾಗ್ಯದ ದಾತೆಗೆ
ಮಾಡುವೆ ಭಕ್ತಿಯ ವಂದನೆ ।।
ಕೊಡಗಲಿ ನೀ ಹುಟ್ಟಿ ಹರಿಯುವೆ ನಲಿವಿಂದ
ತರುತಲಿ ಎಲ್ಲೆಲ್ಲೂ ಆನಂದ
ಹಸಿರಿನ ಬೆಳೆ ತಂದೆ ಕುಡಿಯುವ ಜಲ ತಂದು
ಚೆಲ್ಲುವೆ ನಗೆ ಎಂಬ ಶ್ರೀಗಂಧ
ಧುಮುಕುತ ವೇಗದ ಜಲಪಾತದಲಿ
ವಿದ್ಯುತ್ ನೀಡುವೆ
ಟಯಲಲಿ ಕಾಡಲಿ ಕಲಕಲ ಹರಿಯುತ
ನಾಟ್ಯವ ಮಾಡುವೆ
ಚಂದಗಾಮಿನಿ...... ಶಾಂತಿ ವಾಹಿನಿ......
ಚಿರನೂತನ ಚೇತನ ದಾತೆಯೂ ನೀನೇ
ದಕ್ಷಿಣ ಮಂದಾಕಿನಿ ।।

ಚಿತ್ರ : ಜೀವನದಿ (1996)
ಸಾಹಿತ್ಯ : ಆರ್.ಎನ್. ಜಯಗೋಪಾಲ್
ಸಂಗೀತ : ಕೋಟಿ
ಗಾಯನ : ಎಸ್.ಪಿ. ಬಾಲಸುಬ್ರಹ್ಮಣ್ಯ ಹಾಗೂ ವೃಂದ

# ಕನ್ನಡ ನುಡಿ

'ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಕಿವಿ ನಿಮಿರುವುದು'............

ಎನ್ನುವ ಕವಿವಾಣಿಯಂತೆ ಕನ್ನಡ ಎಂದಾಗ ನಮ್ಮ ಮನಸ್ಸು ಅರಳುತ್ತದೆ. ಜೊತೆಯಲ್ಲಿ ಕಿವಿಯೂ ನಿಮಿರುತ್ತದೆ. ನಾವೆಲ್ಲರೂ ಕನ್ನಡ ತಾಯಿಯ ಮಕ್ಕಳು. ಕನ್ನಡವು ನಮ್ಮ ತಾಯಿ ನುಡಿಯಾಗಿದೆ. ತಾಯಿಯ ಮೇಲೆ ನಮಗೆ ಹೇಗೆ ಮಮತೆ ಇರುವುದೋ ಅದೇ ರೀತಿ ತಾಯಿ ನುಡಿಯ ಮೇಲೂ ಅಪಾರ ಪ್ರೀತಿ, ಗೌರವ, ಅಭಿಮಾನವಿರುತ್ತದೆ.

ನಮಗೆ ಯೋಚಿಸಲು ಕಲಿಸುವುದು ತಾಯಿ ಮತ್ತು ತಾಯಿನುಡಿ. ಈ ತಾಯಿನುಡಿಯ ಹಿರಿಮೆಯ ಬಗ್ಗೆ ಕವಿಯು ಹಾಡಿ ಹೊಗಳಿದ್ದನ್ನು ನಾವೀಗ ಅಭ್ಯಾಸ ಮಾಡುವ ಎಂದು ಹೇಳಿ ಪಾಠ ಪ್ರವೇಶ ಮಾಡಬಹುದು.

***ಕವಿ ಪರಿಚಯ***

## ಬೆಟಗೇರಿ ಕೃಷ್ಣ ಶರ್ಮ

ಆನಂದ ಕಂದ ಎಂಬ ಕಾವ್ಯ ನಾಮದಿಂದ ಪ್ರಸಿದ್ಧರಾದ ಕವಿಭೂಷಣ ಎಂಬ ಬಿರುದಿನಿಂದ ಪುರಸ್ಕೃತರಾದ ಬೆಟಗೇರಿ ಕೃಷ್ಣ ಶರ್ಮರು 1900 ಏಪ್ರಿಲ್ ತಿಂಗಳ 16ರಂದು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಬೆಟಗೇರಿಯಲ್ಲಿ ಜನಿಸಿದರು. ಇವರ ತಂದೆ ಶ್ರೀನಿವಾಸ ರಾಯರು; ತಾಯಿ ರಾಧಾಬಾಯಿ 'ಕಳ್ಳರ ಗುರು ಮತ್ತು ಇತರ ಕಥೆಗಳು', 'ಸಂಸಾರ ಮತ್ತು ಇತರ ಕಥೆಗಳು' ಇವರ ಪ್ರಸಿದ್ಧ ಕಥಾಸಂಕಲನಗಳಾಗಿವೆ. 'ಸುದರ್ಶನ', 'ಮಗಳ ಮದುವೆ', 'ರಾಜಯೋಗಿ' ಅಶಾಂತಿ ಪರ್ವ ಮುಂತಾದವುಗಳು ಇವರ ಕಾದಂಬರಿಗಳು. 'ಮುದ್ದಿನ ಮಾತು' 'ವಿರಹಿಣಿ' 'ಗೌರ ಹುಣ್ಣಿಮೆ' ಮೊದಲಾದವುಗಳು ಕವನ ಸಂಕಲನಗಳಾಗಿವೆ. ಕರ್ನಾಟಕ ವಿಶ್ವವಿದ್ಯಾನಿಲಯ ಇವರಿಗೆ 'ಗೌರವ ಡಾಕ್ಟರೇಟ್' ಪದವಿ ನೀಡಿದೆ. 'ಮಾತೃಭೂಮಿ', 'ಸ್ವಧರ್ಮ', 'ಜಯ ಕರ್ನಾಟಕ' ಪತ್ರಿಕೆಗಳ ಸಂಪಾದಕರಾಗಿ ಇವರು ಕಾರ್ಯ ನಿರ್ವಹಿಸಿದ್ದರು. 1982 ಅಕ್ಟೋಬರ್ 30ರಂದು ತನ್ನ 82ನೇ ವಯಸ್ಸಿನಲ್ಲಿ ಕೃಷ್ಣ ಶರ್ಮರು ಸ್ವರ್ಗಸ್ಥರಾದರು.

- ಮೊದಲು ಮಕ್ಕಳು ವೈಯಕ್ತಿವಾಗಿ ಓದಿ ರಾಗ ಸಂಯೋಜನೆ ಮಾಡಲಿ.
- ಅನಂತರ ಗುಂಪಿನಲ್ಲಿ /ವೈಯಕ್ತಿಕವಾಗಿ ಹಾಡಲಿ, ಸಿಡಿ ಕೇಳಿಸಬಹುದು.
- ಮಕ್ಕಳು ಸೂಚಕಗಳ ಆಧಾರದಲ್ಲಿ ಮೌಲ್ಯಮಾಪನ ಮಾಡಲಿ.
- ಚೆನ್ನಾಗಿ, ರಾಗವಾಗಿ ಹಾಡಿದ ಮಕ್ಕಳನ್ನು ಅಭಿನಂದಿಸುವುದು.
- ಮಕ್ಕಳು ನವೀನ ಪದಗಳನ್ನು ಹುಡುಕಿ ಅರ್ಥವನ್ನು ನಿಘಂಟುವಿನ ಸಹಾಯದಿಂದ ತಿಳಿಯಲಿ.
- ಅಧ್ಯಾಪಕರು ಅದನ್ನು ಕರಿಹಲಗೆಯಲ್ಲಿ ಬರೆದು ಕ್ರೋಡೀಕರಣ ಮಾಡುವುದು.

## ಚಟುವಟಿಕೆಗಳು

### ಚರ್ಚಿಸುವ

ಕವಿ ಕನ್ನಡ ನುಡಿಯನ್ನು ಯಾವುದಕ್ಕೆಲ್ಲಾ ಹೋಲಿಸಿದ್ದಾರೆಂದು ಮಕ್ಕಳು ಗುಂಪಿನಲ್ಲಿ ಚರ್ಚಿಸಲಿ. ಅನಂತರ ಬರೆದು ಮಂಡಿಸಲಿ. ಅಧ್ಯಾಪಕರ ಮಾದರಿಯ ಸಹಾಯದಿಂದ ಉತ್ತಮಪಡಿಸಲಿ.

### ಸಾಲು ಗುರುತಿಸುವ

ಕೊಟ್ಟ ಆಶಯಗಳಿಗೆ ಸೂಕ್ತವಾದ ಸಾಲುಗಳನ್ನು ಪದ್ಯದಿಂದ ಗುರುತಿಸಿ ಬರೆಯಲಿ.

### ವಿಂಗಡಿಸಿ ಬರೆಯುವ

ಕವಿತೆಯಲ್ಲಿ ಕೆಲವು ಪದಗಳು ಒಂದನ್ನೊಂದು ಸೇರಿಕೊಂಡಿರುವ ರೂಪದಲ್ಲಿವೆ. ಅವುಗಳನ್ನು ವಿಂಗಡಿಸಿ ಬರೆಯಿರಿ.

ಬೆಳದಿಂಗಳಿರುಳಲಿ – ಬೆಳ ತಿಂಗಳ ಇರುಳಲಿ (ಬಿಳಿ ತಿಂಗಳು – ಬೆಳದಿಂಗಳು)

### ಸ್ವಾರಸ್ಯ ಬರೆಯುವ

ಅಭ್ಯಾಸ ಭಾಗದಲ್ಲಿ ಕೊಟ್ಟಿರುವ ಪದ್ಯದ ಸಾಲುಗಳ ಸ್ವಾರಸ್ಯವನ್ನು ಓದಿ ತಿಳಿದು, ಅದೇ ರೀತಿ ಕೆಳಗೆ ಕೊಟ್ಟಿರುವ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

- ಕನ್ನಡ ನುಡಿಯನ್ನು ಈ ಪದ್ಯದಲ್ಲಿ ಸೊಗಸಾಗಿ ವರ್ಣಿಸಲಾಗಿದೆ.
- ಇದು ಗಿಳಿಗಳು ಹೇಳುವ ಮೃದುವಾದ ಮಾತುಗಳೋ, ಕೋಗಿಲೆಯ ಇಂಪಾದ ಹಾಡೋ, ಅಥವಾ ಬೆಳಗಿನ ಜಾವದಲ್ಲಿ ಹಾಡುವ ದುಂಬಿಗಳ ಉಲಿಯೋ ಎನ್ನುವ ಹಾಗೆ ಈ ಕನ್ನಡ ನುಡಿಯು ಕಂಡು ಬರುತ್ತದೆ.
- ಕನ್ನಡ ನುಡಿಯನ್ನು ಗಿಳಿಗಳ ಮೃದುವಾದ ಮಾತುಗಳಿಗೆ, ಕೋಗಿಲೆಯ ಇಂಪಾದ ಹಾಡಿಗೆ, ಬೆಳಗಿನ ಜಾವದಲ್ಲಿ ಹಾರುವ ದುಂಬಿಗಳ ಉಲಿಗೆ ಹೋಲಿಸಲಾಗಿದೆ.

### ಕವನ ರಚಿಸುವ

ಕನ್ನಡ ನಾಡುನುಡಿಗೆ ಸಂಬಂಧಿಸಿದ ಪದ್ಯದ ಎರಡು ಸಾಲುಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ವಿದ್ಯಾರ್ಥಿಗಳಲ್ಲಿ ಅದನ್ನು ಮುಂದುವರಿಸಲು ಹೇಳುವುದು.

**ಉದಾ:**

ನಾಡಗೀತೆಯನ್ನು ಹಾಡೋಣ
ನಾಡಸೇವೆಯನು ಮಾಡೋಣ
........................................
........................................

ಮಕ್ಕಳು ತಾವು ಹೇಳಿದ ಪದ್ಯಭಾಗವನ್ನು ವೈಯಕ್ತಿಕವಾಗಿ ಮಂಡಿಸಲಿ.

### ಕವಿತೆ ಹೇಗಿರಬೇಕು?

ಮಕ್ಕಳು ಸೂಚಕಗಳನ್ನು ಹೇಳಲಿ.

*ಸೂಚಕಗಳು:*

- ಪ್ರಾಸಬದ್ಧವಾಗಿರಬೇಕು.
- ಆಶಯ ಸ್ಪಷ್ಟತೆ ಇರಬೇಕು
- ಆಶಯ ಕ್ರಮಾನುಗತವಾಗಿರಬೇಕು
- ರಾಗ, ತಾಳ, ಭಾವದೊಂದಿಗೆ ಹಾಡಲು ಯೋಗ್ಯವಾಗಿರಬೇಕು

ಸೂಚಕಗಳ ಆಧಾರದಲ್ಲಿ ತಾವು ಬರೆದ ಕವನವನ್ನು ಮಕ್ಕಳು ಉತ್ತಮಪಡಿಸಲಿ.

ಕವಿತಾ ಸಂಚಿಕೆಯನ್ನು ಸಿದ್ಧಪಡಿಸಿ, ತರಗತಿಯಲ್ಲಿ ಬಿಡುಗಡೆಗೊಳಿಸಲು ಸೂಚಿಸುವಿರಲ್ಲವೇ,

**ಕವನ ಸಂಗ್ರಹ**

ಕನ್ನಡ ನಾಡುನುಡಿಯ ಬಗ್ಗೆ ಕವಿತೆಗಳನ್ನು ಸಂಗ್ರಹಿಸಿ ಬರೆಯಲಿ; ಸಾಹಿತ್ಯ ಸಭೆಯಲ್ಲಿ ಹಾಡಲಿ.

## ಕನ್ನಡ ಡಿಂಡಿಮ

ಬಾರಿಸು ಕನ್ನಡ ಡಿಂಡಿಮವ,
ಓ ಕರ್ನಾಟಕ ಹೃದಯಶಿವ।
ಸತ್ತಂತಿಹರನು ಬಡಿದೆಚ್ಚರಿಸು
ಕಚ್ಚಾಡುವರನು ಕೂಡಿಸಿ ಒಲಿಸು
ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು
ಒಟ್ಟಿಗೆ ಬಾಳುವ ತೆರದಲಿ ಹರಸು।
ಬಾರಿಸು ಕನ್ನಡ ಡಿಂಡಿಮವ,
ಓ ಕರ್ನಾಟಕ ಹೃದಯ ಶಿವ।
ಕ್ಷಯಿಸೆ ಶಿವೇತರ ಕೃತಿ ಕೃತಿಯಲ್ಲಿ
ಮೂಡಲಿ ಮಂಗಳ ಮತಿ ಮತಿಯಲ್ಲಿ
ಕವಿಋಷಿ ಸಂತರ ಆದರ್ಶದಲ್ಲಿ
ಸರ್ವೋದಯವಾಗಲಿ ಸರ್ವರಲಿ।
ಬಾರಿಸು ಕನ್ನಡ ಡಿಂಡಿಮವ,
ಓ ಕರ್ನಾಟಕ ಹೃದಯಶಿವ।

**– ಕುವೆಂಪು**

## ಸಿರಿಗನ್ನಡಂ ಗೆಲ್ಗೆ

ಮನೆಗಳಲ್ಲಿ ಬಯಲಿನಲ್ಲಿ
ಗುಡಿಗಳಲ್ಲಿ ಗಡಿಗಳಲ್ಲಿ
ಹೊಲಗದ್ದೆ ತೋಟಗಳಲ್ಲಿ
ಗಿರಿಕಾನನ ಕಣಿವೆಯಲ್ಲಿ
ಮೊಳಗಲಿ ಮೊಳಗಲಿ
ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ
ಉತ್ತರದಲಿ ದಕ್ಷಿಣದಲಿ
ಪೂರ್ವದಲಿ ಪಶ್ಚಿಮದಲ್ಲಿ
ಕರಾವಳಿಯ ಕಡಲಿನಲ್ಲಿ
ಮಲೆನಾಡಿನ ಮಡಿಲಿನಲ್ಲಿ
ಉಲಿಯಲಿ ಉಲಿಯಲಿ
ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ
ಸಿರಿವಂತರ ಮಹಲುಗಳಲಿ
ಬಡವರಿರುವ ಗುಡಿಸಲಲ್ಲಿ

ಬೇಸಾಯದ ಕಾಯಕದಲಿ
ಕಾರ್ಖಾನೆಯ ಯಂತ್ರಗಳಲ್ಲಿ
ಕೇಳಲಿ ಕೇಳಲಿ
ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ

– **ಎನ್.ಎಸ್. ಲಕ್ಷ್ಮೀ ನಾರಾಯಣ ಭಟ್ಟ**

* * *

## ನಮೋ ದೇವಿ ನಮೋ ತಾಯಿ

ನಮೋ ದೇವಿ, ನಮೋ ತಾಯಿ ಕನ್ನಡ ಭುವನೇಶ್ವರೀ
ನಮ್ಮ ಭಾಗ್ಯಗಳನ್ನು ಬೆಳೆಸಿ ಸಲಹೇ ರಾಜೇಶ್ವರೀ
ತುಂಬಭದ್ರೆ ಕಾವೇರಿಯ
ಅಮೃತಧಾರೆ ಹರಿಸಿ,
ಜೋಗ ಗಗನಚುಕ್ಕಿಗಳಲಿ
ಬೆಳಕಿನ ಗಣಿ ತೆರೆಸಿ
ಶ್ರೀ ಗಂಧದ ವನಗಳಿಂದ
ಪರಿಮಳಗಳ ಕರೆಸಿ,
ಸಲಹುವೆ ನೀ ಮಕ್ಕಳನ್ನು
ಪ್ರೀತಿಯಿಂದ ಹರಸಿ
ನಿನ್ನ ಭವ್ಯಕಲ್ಪನೆಗೆ
ಸಾಕ್ಷಿ ಮಹಾಗೊಮ್ಮಟ,
ಕೌಶಲ್ಯಕೆ ಬೇಲೂರಿನ
ದಿವ್ಯ ಕಲಾಕಮ್ಮಟ;

ಪಂಪ ಬಸವ ನಾರಣಪ್ಪ
ನೇಯ್ದ ಕಾವ್ಯಚಿತ್ರ,
ಸಾರುತಿವೆ ದೇಶಕೆ ನೀ
ಹಿರಿಯಳೆಂಬ ಸತ್ಯ

– **ಎನ್.ಎಸ್. ಲಕ್ಷ್ಮೀ ನಾರಾಯಣ ಭಟ್ಟ**

* * *

## ನಿತ್ಯೋತ್ಸವ

ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ
ನಿತ್ಯ ಹರಿದ್ವರ್ಣವನದ ತೇಗ ಗಂಧ ತರುಗಳಲ್ಲಿ
ನಿತ್ಯೋತ್ಸವ, ತಾಯಿ ನಿತ್ಯೋತ್ಸವ
ನಿನಗೆ ನಿತ್ಯೋತ್ಸವ ತಾಯಿ ನಿತ್ಯೋತ್ಸವ
ಇತಿಹಾಸದ ಹಿಮದಲ್ಲಿನ ಸಿಂಹಾಸನ ಮಾಲೆಯಲ್ಲಿ
ಗತಸಾಹಸ ಸಾರುತಿರುವ ಶಾಸನಗಳ ಸಾಲಿನಲ್ಲಿ,
ಓಲೆಗರಿಯ ಸಿರಿಗಳಲ್ಲಿ, ದೇಗುಲಗಳ ಭಿತ್ತಿಗಳಲ್ಲಿ
ನಿತ್ಯೋತ್ಸವ, ತಾಯಿ ನಿತ್ಯೋತ್ಸವ
ಹಲವೆನ್ನದ ಹಿರಿಮೆಯೆ, ಕುಲವೆನ್ನದ ಗರಿಮೆಯೆ
ಸದ್ವಿಕಾಸಶೀಲ ನುಡಿಯ ಲೋಕಾಮೃತ ಸೀಮೆಯೆ
ಈ ವತ್ಸರ ನಿರ್ಮತ್ಸರ ಮನದುದಾರ ಮಹಿಮೆಯೆ
ನಿತ್ಯೋತ್ಸವ, ತಾಯಿ ನಿತ್ಯೋತ್ಸವ

– **ಕೆ.ಎಸ್. ನಿಸಾರ್ ಅಹಮದ್**

## ಮೆಟ್ಟುವ ನೆಲ ಕರ್ನಾಟಕ

ಎಲ್ಲಾದರು ಇರು, ಎಂತಾದರು ಇರು
ಎಂದೆಂದಿಗೂ ನೀ ಕನ್ನಡವಾಗಿರು.
ಕನ್ನಡ ಗೋವಿನ ಓ ಮುದ್ದಿನ ಕರು
ಕನ್ನಡತನವೊಂದಿದ್ದರೆ ನೀ ನಿಮಗೆ ಕಲ್ಪತರು।
ನೀ ಮೆಟ್ಟುವ ನೆಲ ಅದೆ ಕರ್ನಾಟಕ;
ನೀನೇರುವ ಮಲೆ – ಸಹ್ಯಾದ್ರಿ.
ನೀ ಮುಟ್ಟುವ ಮರ – ಶ್ರೀಗಂಧದ ಮರ,
ನೀ ಕುಡಿಯುವ ನೀರ್ ಕಾವೇರಿ।
ಪಂಪನನೋದುವ ನಿನ್ನಾ ನಾಲಗೆ
ಕನ್ನಡವೇ ಸತ್ಯ
ಕುಮಾರವ್ಯಾಸನನಾಲಿಪ ಕಿವಿಯದು
ಕನ್ನಡವೇ ನಿತ್ಯ.
ಹರಿಹರ ರಾಘವರಿಗೆ ಎರಗುವ ಮನ,
ಹಾಳಾಗಿಹ ಹಂಪೆಗೆ ಕೊರಗುವ ಮನ,
ಪೆಂಪಿನ ಬನವಾಸಿಗೆ ಕರಗುವ ಮನ;
ಬೆಳ್ಗೊಳ ಬೇಲೂರ್ಗಳ ನೆನೆಯುವ ಮನ
ಜೋಗದ ಜಲಪಾದದಿ ಧುಮುಕುವ ಮನ
ಮಲೆನಾಡಿನ ಹೊಂಪುಳಿವೋಗುವ ಮನ
ಕಾಜಾಣಕೆ ಗಿಳಿ ಕೋಗಿಲೆಯಿಂಪಿಗೆ
ಮಲ್ಲಿಗೆ ಸಂಪಗೆ ಕೇದಗೆ ಸೊಂಪಿಗೆ
ಮಾವಿನ ಹೊಂಗೆಯ ತಳಿರಿನ ತಂಪಿಗೆ

ರಸರೋಮಾಂಚನಗೊಳುವಾತನ ಮನ
ಎಲ್ಲಿದ್ದರೆ ಏನ್? ಎಂತಿದ್ದರೆ ಏನ್?
ಎಂದೆಂದಿಗೂ ತಾನ್
ಕನ್ನಡವೇ ಸತ್ಯ
ಕನ್ನಡವೇ ನಿತ್ಯ
ಅನ್ಯವೆನಲದೆ ಮಿಥ್ಯಾ।

**– ಕುವೆಂಪು**

## ಭಾಗವತರೊಂದಿಗೆ ಸ್ವಲ್ಪ ಹೊತ್ತು

ಕಾಸರಗೋಡು ಹಲವು ಕಲೆಗಳ ತವರೂರು. ಇಲ್ಲಿ ಯಕ್ಷಗಾನ, ಆಟಿಕಳಂಜ, ಸೋಣಜೋಗಿ, ಕನ್ಯಾಪು, ಬೇಡ, ಒಪ್ಪನ, ಭೂತಕೋಲ, ಕೋಲ್ಕಳಿ, ಭರತನಾಟ್ಯ ಇತ್ಯಾದಿ ಕಲೆಗಳು ಪ್ರಚಲಿತದಲ್ಲಿವೆ. ಕರಾವಳಿಯ ಗಂಡುಮೆಟ್ಟಿನ ಕಲೆಯಾದ ಯಕ್ಷಗಾನವು ಹೆಚ್ಚು ಪ್ರಸಿದ್ಧಿಯಲ್ಲಿದೆ. ಈ ಯಕ್ಷಗಾನಕ್ಕೆ ಸರಿಯಾದ ರೂಪುರೇಖೆಗಳನ್ನು ಕೊಟ್ಟ ಹಿರಿಮೆಯು ಕುಂಬಳೆ ಸೀಮೆಯ ಪಾರ್ತಿಸುಬ್ಬನಿಗೆ ಸಲ್ಲುತ್ತದೆ. ಆದ್ದರಿಂದ ಇವನನ್ನು ಯಕ್ಷಗಾನದ ಪಿತಾಮಹನೆಂದು ಕರೆಯುತ್ತಾರೆ. ಅವನು ಯಕ್ಷಗಾನದ ಪೂರ್ವರಂಗಕ್ಕೆ ಸಂಬಂಧಪಟ್ಟ 'ಸಭಾಲಕ್ಷಣ' ಎನ್ನುವ ಗ್ರಂಥವನ್ನು ಬರೆದಿದ್ದಾನೆ.

ಶ್ರೀಮಂತ ಕಲೆಯಾದ ಯಕ್ಷಗಾನವನ್ನು ಪರಿಚಯಿಸುವುದಕ್ಕಾಗಿ 'ಭಾಗವತರೊಂದಿಗೆ ಸ್ವಲ್ಪಹೊತ್ತು' ಎಂಬ ಪಾಠ ಭಾಗವನ್ನು ನೀಡಲಾಗಿದೆ. ಯಕ್ಷಗಾನದ ಸಿಡಿ ಪ್ರದರ್ಶನದೊಂದಿಗೆ ಪಾಠಭಾಗವನ್ನು ಪ್ರಾರಂಭಿಸಬಹುದು.

### ಚಟುವಟಿಕೆಗಳು

#### ಟಿಪ್ಪಣಿ ತಯಾರಿಸುವ

ಭಾಗವತರೊಂದಿಗೆ ನಡೆಸಿದ ಸಂದರ್ಶನ ಪಾಠ ಭಾಗವನ್ನು ಮಕ್ಕಳು ಗುಂಪಿನಲ್ಲಿ ಕುಳಿತು ಓದಿ ಭಾಗವತರ

ಕಾರ್ಯಗಳ ಬಗ್ಗೆ ಚರ್ಚಿಸಿ ಟಿಪ್ಪಣಿ ತಯಾರಿಸಲಿ. ಅನಂತರ ತರಗತಿಯಲ್ಲಿ ಮಂಡಿಸಿ ಅಧ್ಯಾಪಕರ ನೆರವಿನೊಂದಿಗೆ ಉತ್ತಮಪಡಿಸಲಿ.

### ಉತ್ತರ ಬರೆಯುವ

ಪಾಠಭಾಗದ ಪ್ರಶ್ನೆಗಳಿಗೆ ಮಕ್ಕಳು ಪರಸ್ಪರ ಚರ್ಚಿಸಿ ಉತ್ತರ ಬರೆಯಲಿ. ಬಳಿಕ ತರಗತಿಯಲ್ಲಿ ಮಂಡಿಸಿ ಅಧ್ಯಾಪಕರ ಸಹಾಯದಿಂದ ಉತ್ತಮಪಡಿಸಲಿ.

### ವಿವರಣೆ ಬರೆಯುವ

ಯಾವುದಾದರೊಂದು ಪ್ರಸಂಗದ ತುಣುಕೊಂದನ್ನು ಪ್ರದರ್ಶಿಸುವುದು. ಅದರ ವಿವರಣೆಯನ್ನು ಮಕ್ಕಳು ಬರೆಯಲಿ. ಅವುಗಳನ್ನು ಉತ್ತಮಪಡಿಸಲು ಸಂದರ್ಭ ಒದಗಿಸುವುದು.

### ಸಂದರ್ಶನ ನಡೆಸುವ

ಕಲಾವಿದರೊಬ್ಬರ ಸಂದರ್ಶನ ನಡೆಸಬೇಕಾಗಿದೆ. ಅದಕ್ಕಾಗಿ ಸೂಕ್ತ ಕಲಾವಿದರೊಬ್ಬರನ್ನು ಗುರುತಿಸಲಿ. ಅವರಿಂದ ಸಂಗ್ರಹಿಸಬೇಕಾದ ಮಾಹಿತಿ ಕುರಿತು ಚರ್ಚಿಸಲಿ.

- ವ್ಯಕ್ತಿ ಪರಿಚಯ
- ಕಲೆಯ ಕುರಿತು
- ಸಾಧನೆಗಳ ಕುರಿತು.
- ಗಳಿಸಿದ ಪ್ರಶಸ್ತಿಗಳು

ಮೇಲಿನ ವಿಷಯಗಳ ಆಧಾರದಲ್ಲಿ ಮಕ್ಕಳು ಗುಂಪಿನಲ್ಲಿ ಕುಳಿತು ಪ್ರಶ್ನಾವಳಿಗಳನ್ನು ತಯಾರಿಸಲಿ. ಅದನ್ನು ಕ್ರಮೀಕರಿಸಿ ಮಂಡಿಸಲಿ. ಬಿಟ್ಟು ಹೋದ ವಿಷಯಗಳಿದ್ದಲ್ಲಿ ಅಧ್ಯಾಪಕರು ಸೂಚಿಸಲಿ. ಅಧ್ಯಾಪಕರು ಕ್ರಮೀಕರಿಸಿ ಕರಿಹಲಗೆಯಲ್ಲಿ ಬರೆಯಲಿ. ಈ ಪ್ರಶ್ನೆಗಳನ್ನು ಸಂದರ್ಶನದ ವೇಳೆಯಲ್ಲಿ ಕೇಳಲು ಮಕ್ಕಳಿಗೆ ಹಂಚುವುದು.

ಸಂದರ್ಶನ ನಡೆಸುವ ದಿನ ಕಲಾವಿದರೊಡನೆ ಒಂದೆರಡು ಮಾತುಗಳನ್ನಾಡುವ ಹಾಗೂ ಧನ್ಯವಾದವನ್ನು ನೀಡುವ ಜವಾಬ್ದಾರಿಯನ್ನು ಅಧ್ಯಾಪಕರು ಮಕ್ಕಳಿಗೆ ನೀಡುವುದು. ಸಂದರ್ಶನದ ವೇಳೆಯಲ್ಲಿ ಕಲಾವಿದರು ಹೇಳಿದ ಮಾಹಿತಿಗಳನ್ನು ಮಕ್ಕಳು ಬರೆದಿಟ್ಟುಕೊಳ್ಳುವಂತೆ ಸೂಚಿಸುವುದು. ಆ ಬಳಿಕ ಸಂದರ್ಶನ ವರದಿ ತಯಾರಿಸಲಿ.

### ವೀಕ್ಷಿಸುವ

ಸಿಡಿಯಲ್ಲಿ ನೀಡಿದ ಯಕ್ಷಗಾನದ ಸಣ್ಣ ಪ್ರಸಂಗವನ್ನು ಪ್ರದರ್ಶಿಸುವುದು. ಮಕ್ಕಳು ಗಮನವಿಟ್ಟು ವೀಕ್ಷಿಸಲಿ. ತಾವು ನೋಡಿದ ಪ್ರಸಂಗದ ಕಥೆಯನ್ನು ವೈಯಕ್ತಿಕವಾಗಿ ಬರೆಯಲಿ. ತರಗತಿಯಲ್ಲಿ ಮಂಡಿಸಲಿ.

### ಸ್ವಂತ ವಾಕ್ಯ ರಚಿಸುವ

ನೀಡಿದ ಗದ್ಯಭಾಗವನ್ನು ಮಕ್ಕಳು ಓದಲಿ. ಅಡಿಗೆರೆ ಎಳೆದ ಪದದ ಅರ್ಥವನ್ನು ತಿಳಿಯಲಿ. ಆ ಪದಗಳನ್ನು ಬಳಸಿ ಸರಳ ವಾಕ್ಯವನ್ನು ಬರೆಯಲಿ. ಮಕ್ಕಳು ಪರಸ್ಪರ ಮೌಲ್ಯಮಾಪನ ಮಾಡಲಿ.

ಅಧ್ಯಾಪಕರ ಮಾದರಿಯನ್ನು ನೋಡಿ ಮಕ್ಕಳು ತಮ್ಮ ರಚನೆಯನ್ನು ಉತ್ತಮಪಡಿಸಲಿ.

### ಆಲ್ಬಂ ತಯಾರಿಸುವ

ಮಕ್ಕಳು ವಿವಿಧ ತರದ ಸಂಗೀತೋಪಕರಣಗಳನ್ನು ಪಟ್ಟಿಮಾಡಲಿ. ಅವುಗಳ ಚಿತ್ರಗಳನ್ನು ಪತ್ರಿಕೆಗಳಿಂದ/ ಇತರ ಕಡೆಗಳಿಂದ ಸಂಗ್ರಹಿಸಲು ಹೇಳುವುದು. ಸಂಗ್ರಹಿಸಿದ ಚಿತ್ರಗಳನ್ನು ವರ್ಗೀಕರಿಸಿ ಅಂದವಾಗಿ ಕಾಗದ/ಪುಸ್ತಕದಲ್ಲಿ

ಅಂಟಿಸಿ ಅದಕ್ಕೆ ಸಂಬಂಧಪಟ್ಟ ಲಘು ಟಿಪ್ಪಣಿಯನ್ನು ಬರೆಯಲು ಹೇಳುವುದು. ಆಲ್ಬಂಗಳನ್ನು ಹೋಲಿಸಿ, ವರ್ಗೀಕರಿಸಿ, ವಿಶ್ಲೇಷಣೆ ನಡೆಸಿ ಮೌಲ್ಯನಿರ್ಣಯ ಮಾಡಲಿ.

## ಮೌಲ್ಯನಿರ್ಣಯ ಚಟುವಟಿಕೆಗಳು

### ಚಟುವಟಿಕೆ 1

ಕೆಳಗೆ ಕೊಡಲಾದ ಪದ್ಯವನ್ನು ಓದಿ ಸಾರಾಂಶ ಬರೆಯಿರಿ.

ಜೋ ಜೋ ಕಂದ ಅಳಬೇಡ
ಅಮ್ಮನ ಬಾಳಿನ ಮಕರಂದ
ನಿನ್ನಯ ಆಟವು ಬಲುಚಂದ
ಅಳಬೇಡ ಕಂದ ಅಳಬೇಡ

ದೇವಕಿ ಕಂದ ಬಾಲ ಮುಕುಂದ
ನನ್ನಯ ಕಂದ ನೀ ಶ್ರೀಗಂಧ
ನಗುನಗುತ ಕುಣಿದರೆ ಬಲುಚಂದ
ಅಳಬೇಡ ಕಂದ ಅಳಬೇಡ

ಅಜ್ಜ ಬರುವರು ನೋಡಲ್ಲಿ
ಥೈತಕ ಕುಣಿಯುವರು ನಿನಕೂಡಿ
ನಗುಮೊಗದ ಆಟವು ಚೆಲುವಯ್ಯ
ಅಳಬೇಡ ಕಂದ ಅಳಬೇಡ

– **ನೆಟ್ಟಣಿಗೆ ಪುರುಷೋತ್ತಮ ಆಚಾರ್ಯ**

### ಚಟುವಟಿಕೆ 2

ಕೆಳಗೆ ಕೊಟ್ಟಿರುವ ಕಥಾಭಾಗವನ್ನು ಓದಿ ಪಾತ್ರಗಳನ್ನು ಗುರುತಿಸಿಕೊಂಡು ಯೋಗ್ಯ ಸಂಭಾಷಣೆ ಬರೆಯಿರಿ.

ರಾಮಕೃಷ್ಣನು ಅವಸರ ಮಾಡುತ್ತ ಅಯ್ಯೋ ಕಾವಲುಗಾರನೇ ನಾನು ಹೇಳುವ ಮಾತುಗಳನ್ನು ಪರಿಪೂರ್ಣವಾಗಿ ಕೇಳು. ನಂತರ ನೀನು ಹೇಳುವಿಯಂತೆ. ಇದೀಗ ಒಳಗೆ ಹೋದವರು ನಮ್ಮವರು. ನಾನೂ ಆ ಗುಂಪಿನಲ್ಲಿ ಒಬ್ಬನು. ಇಂದು ಮಹಾರಾಜರಲ್ಲಿ ನನ್ನ ಗಾಯನವನ್ನು ಮಾಡಿ ತೋರಿಸುವವನಿದ್ದೇನೆ. ಆ ಗಾಯನದಲ್ಲಿ ನಾನು ಪ್ರಶಸ್ತಿ ಪತ್ರವನ್ನು ಪಡೆದು ಬಹುಮಾನವನ್ನು ಪಡೆಯಬೇಕಾಗಿದೆ. ಇದೋ ನೋಡಿಲ್ಲಿ" ಬಗಲಿಗೆ ಹಾಕಿದ ತಂಬೂರಿಯನ್ನು ರಾಜಸೇವಕನಿಗೆ ತೋರಿಸಿದನು. ರಾಜಸೇವಕನು ರಾಮಕೃಷ್ಣನಿಗೆ " ಅಹುದಪ್ಪಾ ದೊಡ್ಡ ಮನುಷ್ಯ, ನೀನು ಅವರ ಸಂಗಡ ಹೋಗಬೇಕಿತ್ತು. ಅವರನ್ನು ಬಿಟ್ಟು ಪರರನ್ನು ಬಿಡಬಾರದು ಎಂದು ನಮಗೆ ಕಟ್ಟಪ್ಪಣೆಯಾಗಿದೆ. ಆದ ಕಾರಣ ನೀನು ಬಂದದಾರಿಗೆ ಸುಂಕವಿಲ್ಲವೆಂದು ಸುಮ್ಮನೆ ಹೊರಟುಹೋಗು" ಎಂದು ನುಡಿಯಲು ರಾಮಕೃಷ್ಣನು ಅತಿ ವಿನಯವಾಗಿ ರಾಜಸೇವಕನಿಗೆ "ಅಯ್ಯೋ ಸ್ವಾಮಿ! ನಾನು ಬಡವ, ನಾನಿಂದು ನಾಟಕದಲ್ಲಿ ಜಯಗಳಿಸುವುದು ಖಚಿತವೆಂದು ಹೊರಟಿದ್ದೇನೆ. ದಯಮಾಡಿ ನನಗೆ ಹೋಗಲಿಕ್ಕೆ ಅಪ್ಪಣೆ ಕೊಡು! ಎಂದು ನುಡಿದು ಒಳಗೆ ಹೋಗುವಷ್ಟರಲ್ಲಿ – ರಾಜಸೇವಕನು ರಾಮಕೃಷ್ಣನನ್ನು ತಡೆದು "ಏನಯ್ಯಾ ನಾಟಕ ಕಂಪನಿ ಲಪೂಟನೆ? ನಿನ್ನ ಹೆಸರೇನು?" ಎಂದು ಕೇಳಲು, ರಾಮಕೃಷ್ಣನು "ಅಯ್ಯೋ, ನನ್ನ ಜನ್ಮನಾಮದ ಹೆಸರು ರಾಮಕೃಷ್ಣ' ನೆಂದು ನುಡಿಯಲು ರಾಜಸೇವಕನು "ರಾಮಕೃಷ್ಣಾ, ನೀನು ಇಷ್ಟು ವಿಶ್ವಾಸದಿಂದ ಹೇಳುವಿ ಅಂದ ಮೇಲೆ ನನಗೆ ಬಹುಕನಿಕರವಾಗುತ್ತಿದೆ. ಆದರೆ ನೀನು ನಾನು ಹೇಳಿದಂತೆ ಕೇಳಿದರೆ ಮಾತ್ರ ಬಿಡಬಲ್ಲೆ" ಎನ್ನುವಷ್ಟರಲ್ಲಿ ರಾಮಕೃಷ್ಣನು ರಾಜಸೇವಕನಿಗೆ ವಿನಯದಿಂದ" ನಿಮ್ಮ ಹೇಳಿಕೆಯಂತೆ ಕೇಳುವೆನು. ಹೇಳಿರಿ, ಬೇಗನೆ ಹೇಳಿರಿ. ವೇಳೆಯು ವಿಶೇಷವಾಯಿತು" ಎಂದು

ಗಡಿಬಿಡಿಯಿಂದ ನುಡಿದನು. (ರಾಮಕೃಷ್ಣನು ಕೃಷ್ಣದೇವರಾಯ ಅರಸನ ಮನವೊಲಿಸಿಕೊಂಡ ಕಥೆಯ ಭಾಗ)

**ಚಟುವಟಿಕೆ 3**

**ಕೆಳಗಿನ ಪದ್ಯಭಾಗವನ್ನು ಓದಿರಿ**

## ಕನ್ನಡಿಗರ ತಾಯಿ

ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ!
ನಮ್ಮ ತಪ್ಪನೆನಿತೊ ತಾಳ್ವೆ
ಅಕ್ಕರೆಯಿಂದೆಮ್ಮ ನಾಳ್ವೆ
ನೀನೆ ಕಣಾ ನಮ್ಮ ಬಾಳ್ವೆ
ನಿನ್ನ ಮರೆಯಲಮ್ಮೆವು
ತನು ಕನ್ನಡ, ಮನ ಕನ್ನಡ, ಧನ ಕನ್ನಡವೆಮ್ಮವು॥

**– ಎಂ. ಗೋವಿಂದ ಪೈ**

ಇದರಲ್ಲಿ ತನುಕನ್ನಡ, ಮನಕನ್ನಡ, ಧನಕನ್ನಡವೆಮ್ಮವು ಎಂಬ ಸಾಲಿನ ಸ್ವಾರಸ್ಯವನ್ನು ಬರೆಯಿರಿ.

**ಚಟುವಟಿಕೆ 4**

ನೀವು ನೋಡಿದ ಯಾವುದಾದರೂ ಒಂದು ಯಕ್ಷಗಾನ ಬಯಲಾಟದ ವಿವರಣೆಯನ್ನು ಬರೆಯಿರಿ.

(ಯಾವುದಾದರೂ ಒಂದು ಪಾತ್ರದ ಬಗ್ಗೆ ಅಥವಾ ವೇಷಭೂಷಣದ ಬಗ್ಗೆಯೂ ಆಗಬಹುದು)

**ಚಟುವಟಿಕೆ 5**

ನಿಮ್ಮ ಊರಿನ ಪ್ರಸಿದ್ಧ ಯಕ್ಷಗಾನ ಕಲಾವಿದರು ನಿಮ್ಮ ಶಾಲೆಗೆ ಬಂದಿದ್ದಾರೆ. ನೀವೀಗ ಅವರ ಸಂದರ್ಶನವನ್ನು ನಡೆಸಬೇಕಾಗಿದೆ. ಸಂದರ್ಶನದಲ್ಲಿ ಏನೆಲ್ಲ ಪ್ರಶ್ನೆಗಳನ್ನು ಕೇಳಬಹುದು?

- ಹೆಸರು, ಪರಿಚಯ
- ವಿದ್ಯಾಭ್ಯಾಸ
- ವೇಷ ಭೂಷಣಗಳು
- ನಿರ್ವಹಿಸಿದ ಪಾತ್ರಗಳು, ಇಷ್ಟವಾದ ಪಾತ್ರಗಳು
- ಪ್ರಶಸ್ತಿಗಳು

ಸಂದರ್ಶನಕ್ಕೆ ಸೂಕ್ತವಾದ ಪ್ರಶ್ನಾವಳಿಯನ್ನು ಸಿದ್ಧಪಡಿಸಿರಿ.

**ಚಟುವಟಿಕೆ 6**

ಕೆಳಗೆ ಕೊಡಲಾದ ಕಥನ ಕವನವನ್ನು ಓದಿ ನಿಮ್ಮದೇ ವಾಕ್ಯಗಳಲ್ಲಿ ಕಥೆಯಾಗಿ ರೂಪಾಂತರಿಸಿ ಬರೆಯಿರಿ.

## ಜೇಡನೂ ನೊಳವೂ

ಬಾ ನೊಳವೆ, ಬಾ ನೊಳವೆ, ಬಾ ನನ್ನ ಮನೆಗೆ,
ಬಾನೊಳಗೆ ಹಾರಿ ಬಲು ದಣುವಾಯ್ತು ನಿನಗೆ,
ನೀನೊಮ್ಮೆ ಬಾ, ನನ್ನ ಹೊಸಮನೆಯ ನೋಡು,
ಈ ನೂಲಿನಾ ಚಾಪೆಯಲಿ ಬಂದು ಕೂಡು.
“ಎಲೆ ನೊಳವೇ ನಿನ್ನ ತಿರುಗಾಟವನು ನೋಡಿ,
ತಲೆತಿರುಗುತಿದೆ ನನಗೆ, ಬಾರೊ ದಯಮಾಡಿ!
ಎಲೆಯ ಹಾಕಿರುವೆ, ನೀನುಂಡು ಸುಖಿಯಾಗು,
ಮಲಗು ಎಳೆಹಾಸಿನಲಿ, ಬಳಿಕೆದ್ದು ಹೋಗು”
“ಅರರೆ ನೊಳಮರಿ! ಬೊಂಬೆ! ಮೈಗಂಧ ನಿಂಬೆ!

ಹರಿನೀಲ ಕಣ್ಣೊಂಬೆ ನೋಡಿ ಸೊಗಗೊಂಬೆ!
ಗರಿ ಪಚ್ಚೆಯಲಿ ತುಂಬೆ, ಹಾ ಹಾ! ಹೊಸತುಂಬೆ!
ಸ್ವರವು ಝೇನ್ ಝೇನೆಂಬೆ, ಮಧುರವಿನಿತಿಂಬೆ"

ಗಾಳಿಯೂದಿನ ಚೆಂಡು ಬಲು ಹಿಗ್ಗುವಂತೆ,
ಬೀಳಿಕಿವಿಯಲಿ ಮಾತು ನೊಳ ಉಬ್ಬಿತಂತೆ;
ಆಳನೋಡದೆ ಮಡುವಿನಲಿ ಧುಮುಕುವಂತೆ
ಬೋಳು ತಲೆನೊಳವು ಬಲೆಯಲಿ ಹಾರಿತಂತೆ

(ನೊಳ – ನೊಣ, ದಣುವು – ಆಯಾಸ, ಎಳೆಹಾಸು – ಮೃದುವಾದ ನೂಲಿನ ಹಾಸಿಗೆ, ಹರಿನೀಲ – ಕಡುನೀಲಿ ಬಣ್ಣದ, ಮಡು – ಆಳವಾದ ಹೊಂಡ)

* * *